ಸಂಪುಟ 01 | ಸಂಚಿಕೆ 19 | ಶನಿವಾರ 29 ನವೆಂಬರ್ 2025 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

MA ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೇಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

1)ಅಂತರರಾಷ್ಟ್ರೀಯ ಜಾಗ್ವಾರ್ ದಿನ

ಜಾಗ್ವಾರ್‌ಗಳು ಎದುರಿಸುತ್ತಿರುವ ಬೆದರಿಕೆಗಳು ಮತ್ತು ಅವುಗಳ ಸಂರಕ್ಷಣೆಯ ಮಹತ್ವದ ಬಗ್ಗೆ ಜಾಗೃತಿ ಮೂಡಿಸಲು ನವೆಂಬರ್ 29 ರಂದು ಅಂತರರಾಷ್ಟ್ರೀಯ ಜಾಗ್ವಾರ್ ದಿನವನ್ನು ಆಚ-ರಿಸಲಾಗುತ್ತದೆ. ಜೀವವೈವಿಧ್ಯತೆಯಲ್ಲಿ "ಛತ್ರಿ ಪ್ರಭೇದ" ವಾಗಿ ಜಾಗ್ವಾರ್‌ನ ನಿರ್ಣಾಯಕ ಪಾತ್ರವನ್ನು ಈ ದಿನ ಎತ್ತಿ ತೋ-ರಿಸುತ್ತದೆ, ಏಕೆಂದರೆ ಅದರ ಆವಾಸಸ್ಥಾನವನ್ನು ರಕ್ಷಿಸುವುದು ಇತರ ಹಲವು ಪ್ರಭೇದಗಳು ಮತ್ತು ಪರಿಸರ ವ್ಯವಸ್ಥೆಗಳನ್ನು ಸಂರಕ್ಷಿಸಲು ಸಹಾಯ ಮಾಡುತ್ತದೆ ಮತ್ತು ಅದರ ಸಾಂಸ್ಕೃತಿಕ ಮಹತ್ವವನ್ನು ಗೌರವಿಸುತ್ತದೆ.

## ಸುಭಾಷಿತ

ಜೀವನದಲ್ಲಿ ನಾವೇನು ಸಾಧಿಸಿದ್ದೇವೆ
ಎನ್ನುವುದು ಮುಖ್ಯವಲ್ಲ; ಇನ್ನೂ
ಮಾಡುವುದೇನಿದೆ ಎಂದು
ಚಿಂತಿಸುವುದು ಮುಖ್ಯ.

-ಗೌತಮ ಬುದ್ಧ

# ಲಕ್ಷ ಕಂಠ ಗೀತಾ ಪಾರಾಯಣದಲ್ಲಿ ಪಾಲ್ಗೊಂಡಿರುವುದು ನನ್ನ ಪುಣ್ಯ :ಮೋದಿ

**ನವದೆಹಲಿ: ಉಡುಪಿಯ ಶ್ರೀ ಕೃಷ್ಣ ಮಠಕ್ಕೆ ಭೇಟಿ ನೀಡಿ ಲಕ್ಷ ಕಂಠ ಗೀತಾ ಪಾರಾಯಣ ಕಾರ್ಯಕ್ರಮದಲ್ಲಿ ಭಾಗವಹಿಸುವ ಅವಕಾಶ ದೊರೆತಿರು ವುದು ನನಗೆ ಸಿಕ್ಕ ಪುಣ್ಯ ಎಂದು ಪ್ರಧಾನಿ ನರೇಂದ್ರ ಮೋದಿ ಭಾವುಕರಾಗಿದ್ದಾರೆ.**

ಗೀತಾ ಪಠಣಕ್ಕಾಗಿ ಸಮಾಜದ ವಿವಿಧ ವರ್ಗಗಳ ಜನರನ್ನು ಒಂದೆಡೆ ಸೇ-ರಿಸುವ ವಿಶೇಷ ಕಾರ್ಯಕ್ರಮ ಇದಾಗಿದೆ. ಉಡುಪಿ ಮಠವು ನಮ್ಮ ಸಾಂಸ್ಕೃತಿಕ ಜೀವನದಲ್ಲಿ ಅತ್ಯಂತ ವಿಶೇಷ ಮಹತ್ವವನ್ನು ಹೊಂದಿದೆ. ಶ್ರೀ ಮಧ್ವಾಚಾರ್ಯ-ರಿಂದ ಪ್ರೇರಿತವಾದ ಈ ಮಠವು, ಸಮಾಜ ಸೇವೆಯಲ್ಲಿ ಮುಂಚೂಣಿಯಲ್ಲಿದೆ ಎಂದು ಮೋದಿ ಎಕ್ಸ್ ಮಾಡಿದ್ದಾರೆ. ಇಂದು ವಿಶೇಷ ವಿಮಾನದಲ್ಲಿ ಬೆಳಗ್ಗೆ ಮಂಗಳೂ-ರಿಗೆ ಬಂದಿಳಿದ ಪ್ರಧಾನಿ ಮೋದಿ, ಸೇನಾ ಹೆಲಿಕಾಪ್ಟರ್‌ನಲ್ಲಿ ಉಡುಪಿಗೆ ಆಗಮಿಸಿದರು.

ಈ ಸಂದರ್ಭದಲ್ಲಿ ಅವರು ಕಿಕ್ಕಿರಿದು ಸೇರಿದ್ದ ಜನಸಮೂಹದ ನಡುವೆ ರಥಬೀದಿಯಲ್ಲಿ ರಸ್ತೆ ಮೂಲಕ ದೇವಾಲಯಕ್ಕೆ ಆಗಮಿಸಿದರು. ಮೋದಿ ರೋಡ್ ಶೋ ವೇಳೆ ಜನ ಮೋದಿ ಮೋದಿ ಎಂದು ಜೈಕಾರ ಕೂಗಿದರು. ನಂತರ ಅವರು ಸುವರ್ಣ ಕನಕನ ಕಿಂಡಿ ಲೋಕಾರ್ಪಣೆ ಮಾಡಿ ಕಿಂಡಿ ಮೂಲಕ ಶ್ರೀ ಕೃಷ್ಣನ ದರ್ಶನ ಪಡೆದರು. ನಂತರ ಅವರು ಕನಕದಾಸರ ಗುಡಿ ದರ್ಶನ ಮಾಡಿ ಮಠಕ್ಕೆ ಆಗಮಿಸಿ ಮಧ್ವ ಸರೋವರದಲ್ಲಿ ತೀರ್ಥ ಪ್ರೋಕ್ಷಣೆ ಮಾಡಿಕೊಂಡರು.



ನಂತರ ಚಿನ್ನದ ತೀರ್ಥ ಮಂಟಪವನ್ನು ಉದ್ಘಾಟಿಸಿ, ಅಷ್ಟಮಠಾಧೀಶರನ್ನು ಭೇಟಿ ಮಾಡಿ ಪ್ರಸಾದ ಸ್ವೀಕರಿಸಿ ಗೀತಾ ಮಂದಿರಕ್ಕೆ ಆಗಮಿಸಿದರು.ಬಿಗಿ ಬಂದೋಬಸ್ತ್; ಪ್ರಧಾನಿ ಮೋದಿ ಭೇಟಿ ಹಿನ್ನೆಲೆಯಲ್ಲಿ ಉಡುಪಿ ಬನ್ನಂಜೆಯಿಂದ ಕಲ್ಸಂಕ ಜಂಕ್ಷನ್‌ವರೆಗೆ ಬಿಗಿ ಪೊಲೀಸ್ ಬಂದೋಬಸ್ತ್ ಕೈಗೊಳ್ಳಲಾಗಿದೆ. ಎರಡು ಕಿಲೋಮೀಟರ್‌ವರೆಗೆ ರಸ್ತೆಯಲ್ಲಿ ಬಾಂಬ್ ಸ್ಕ್ವಾಡ್ ಗಸ್ತು ನಿಯೋಜಿಸಲಾಗಿದೆ. ಹೆಲಿಪ್ಯಾಡ್ ವಠಾರ, ಶ್ರೀಕೃಷ್ಣ ಮಠ ವಠಾರ, ಪ್ರವಾಸಿ ಮಂದಿರದ ಸುತ್ತಮುತ್ತ ಅಂಗಡಿ ಮುಂಗಟ್ಟು ಮುಚ್ಚಲು ಸೂಚಿಸಲಾಗಿದೆ. ಅಲ್ಲದೇ ಪ್ರಧಾನಿ ಮೋದಿ ಸಂಚರಿಸುವ ಮಾರ್ಗದ ಅಂಗಡಿ ಮುಂಗಟ್ಟು ಮುಚ್ಚಲು ಸೂಚನೆ ನೀಡಲಾಗಿದೆ. ಸಂಜೆ 6 ಗಂಟೆಯವರೆಗೆ ನಗರದ 5 ಕಿ.ಮೀ ವ್ಯಾಪ್ತಿಯಲ್ಲಿ ಡ್ರೋನ್ ಹಾರಾಟ ನಿಷೇಧಿಸಲಾಗಿದೆ.

## ಜ್ಞಾನ ಸೇತು ಕಾರ್ಯಕ್ರಮ ದಲ್ಲಿ ಸುಖದೇವ ಹಿರಿಯ ಉಪನ್ಯಾಸಕರಿಗೆ ಸಮ್ಮಾನ

❑ ನೈಜ್ಯ ದೇಸೆ ನ್ಯೂಸ್

**ಜ್ಞಾನ ಸೇತು ಕಾರ್ಯಕ್ರಮದಲ್ಲಿ ರಾಜ್ಯದಲ್ಲಿಯೇ ರಾಯಚೂರು ಜಿಲ್ಲೆಯ ಅತ್ಯುತ್ತಮ ಪ್ರಗತಿಗಾಗಿ ಖಾನ್ ಅಕಾಡೆಮಿಯ ಪ್ರಶಂಸೆಗೆ ಪಾತ್ರರಾಗಿ ದೆಹಲಿಯಲ್ಲಿ ಸನ್ಮಾನ ಸ್ವೀಕ-ರಿಸಿದ ಮಾನ್ಯ ಶ್ರೀ ಸುಖದೇವ್ ಹಿರಿಯ ಉಪನ್ಯಾಸಕರು ಡಯಟ್ ಇವರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆರ್ ಎಂ ಎಸ್ ಎ ಆರ್ ಎಚ್ ಕಾಲೋನಿ 1 ಗೆ ಭೇಟಿ ನೀಡಿ ಮಾರ್ಗದರ್ಶನ ಮಾಡಿದರು. ಈ ಸಂದರ್ಭದಲ್ಲಿ ಮಾನ್ಯರಿಗೆ ಆರ್ ಹೆಚ್ ಕಾಲೋನಿ1 ಗ್ರಾಮದ ಸ್ವಾಮಿ ವಿವೇಕಾನಂದ ಸಂಘದ ವತಿಯಿಂದ ಅಭಿನಂದನೆ ಸಲ್ಲಿಸಲಾಯಿತು.**



## ಡಿಸೆಂಬರ್ 2 ಮತ್ತು 3 ರಂದು ರಾಜ್ಯ ಮಟ್ಟದ ಲಾನ್ ಟೆನ್ನಿಸ್ ಪಂದ್ಯಾವಳಿ :ಆರ್ ಸಿ ಪಾಟೀಲ್

❑ ನೈಜ್ಯ ದೇಸೆ ನ್ಯೂಸ್

**ಶಿಕ್ಷಣ ಇಲಾಖೆ, (ಪದವಿ ಪೂರ್ವ) ಬೆಂಗಳೂರು, ಉಪ ನಿರ್ದೇಶಕರು, ರಾಯಚೂರು. ಆರ್.ಜಿ.ಎಂ. ಪದವಿ ಪೂರ್ವ ಕಾಲೇಜು ಹಾಗೂ ದುಡ್ಡುಪಡಿ. ಪದವಿ ಪೂರ್ವ ಕಾಲೇಜು ಹಾಗೂ ಆಕ್ಸರ್ಡ್ ಪದವಿ ಪೂರ್ವ ಕಾಲೇಜು, ಎಫ್.ಆರ್.ಸಿ.ಎಸ್ ಕ್ಲಬ್, ಸಿಂಧನೂರು ತಾಲೂಕ ಸರಕಾರಿ ಅನುದಾನಿತ ಮತ್ತು ಅನುದಾನ ರಹಿತ ಕಾಲೇಜುಗಳು ಇವರುಗಳ ಸಂಯುಕ್ತಾಶ್ರಯದಲ್ಲಿ 2025 26ನೇ ಸಾಲಿನ ರಾಜ್ಯ ಮಟ್ಟದ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳ ಲಾನ್ ಟೆನ್ನಿಸ್ ಪಂದ್ಯಾವಳಿಯನ್ನು ಡಿಸೆಂಬರ್ 02 ಮತ್ತು 3ರಂದು ಎಫ್.ಆರ್.ಸಿ.ಎಸ್.ಕ್ಲಬ್‌ನಲ್ಲಿ ಹಮ್ಮಿಕೊಳ್ಳಲಾಗಿದೆ.**

ಎಂದು ಆರ್.ಸಿ.ಪಾಟೀಲ್, ಮಾಜಿ ಸಿಂಡಿಕೇಟ್ ಸದಸ್ಯರು ಮತ್ತು ಕಾರ್ಯದರ್ಶಿಗಳು, ಪಾಟೀಲ್ ಶಿಕ್ಷಣ ಸಂಸ್ಥೆ, ಸಿಂಧನೂರು ಇವರು ಸುದ್ದಿಗಾರರೊಂದಿಗೆ ಮಾತನಾಡಿ ಈ ಕಾರ್ಯಕ್ರಮವನ್ನು ಜಿಲ್ಲಾ ಉಸ್ತುವಾರಿ ಸಚಿವ ಶರಣಪ್ರಕಾಶ ಪಾಟೀಲ್ ಉದ್ಘಾಟಿಸುತ್ತಾರೆ ಪ್ರಾಥಮಿಕ



ಮತ್ತು ಪ್ರೌಢಶಿಕ್ಷಣ ಸಚಿವ ಮಧು ಬಂಗಾರಪ್ಪ, ಸಣ್ಣ ನೀರಾಮ ಸಚಿವ ಎನ್. ಎಸ್ ಬೋಸರಾಜು ಪಾಲ್ಗೊಳ್ಳುವರು. ಸ್ಥಳೀಯ ಶಾಸಕರಾದ ಹಂಪನಗೌಡ ಬಾದರ್ಲಿ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಶಾಸಕರಾದ ಆರ್.ಬಸನಗೌಡ ತುರುವಿಹಾಳ, ಬಸನಗೌಡ ದದ್ದಲ, ಸಂಸದರಾದ ರಾಜಶೇಖರ ಹಿಟ್ನಾಳ, ಕುಮಾರ ನಾಯಕ, ಶಾಸಕರಾದ ಡಾ. ಶಿವರಾಜ ಪಾಟೀಲ್, ಜಿ.ಹಂಪಯ್ಯ ನಾಯಕ, ಮಾನಪ್ಪ ಡಿ.ವಜ್ಜಲ, ಕರಿಯಮ್ಮ ಜಿ.ನಾಯಕ, ವಿಧಾನ ಪರಿಷತ್ ಸದಸ್ಯರಾದ ಶಶೀಲ್ ಜಿ.ನಮೋಶಿ, ಶರಣಗೌಡ ಪಾಟೀಲ್ ಬಯ್ಯಾಪುರ, ಡಾ.ಚಂದ್ರಶೇಖರ ಪಾಟೀಲ್, ಎ.ವಸಂತಕುಮಾರ, ಬಸನಗೌಡ ಬಾದರ್ಲಿ, ಕೆ.ಓ.ಎಫ್ ಅಧ್ಯಕ್ಷ ವೆಂಕಟ-ರಾವ್ ನಾಡಗೌಡ, ಮಾಜಿ ಸಂಸದ ಕೆ.ವಿರೂಪಾಕ್ಷಪ್ಪ, ನಗರಾಭಿವೃದ್ಧಿ ಪ್ರಾಧಿಕಾರ, ಬಾಬುಗೌಡ ಬಾದರ್ಲಿ, ಎಫ್.ಆರ್.ಸಿ.ಎಸ್ ಕ್ಲಬ್ ಅಧ್ಯಕ್ಷ ಚಂದ್ರಶೇಖರ ಪಾಟೀಲ್ (ಸಿ.ಟಿ ಪಾಟೀಲ್), ಶರಣಬಸವೇಶ್ವರ ಶಿಕ್ಷಣ ಸಂಸ್ಥೆ ಅಧ್ಯಕ್ಷ ಡಾ। ಚನ್ನನಗೌಡ ಆರ್.ಪಾಟೀಲ್, ಕಾರ್ಯದರ್ಶಿ ಆರ್. ಪದ್ಮನಾಭ ಭಾಗವಹಿಸುವರು.

ವಿಶೇಷ ಆಹ್ವಾನಿತರಾಗಿ ಅಬಕಾರಿ ಇಲಾಖೆ ಆಯುಕ್ತರು ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಡಾ. ಜೆ.ರವಿಶಂಕರ, ಪದವಿ ಪೂರ್ವ ಶಿಕ್ಷಣ ಇಲಾಖೆ ನಿರ್ದೇಶಕ ಭರತ ಎಸ್, ಜಿಲ್ಲಾಧಿಕಾರಿ ನಿತೀಶ.ಕೆ, ಜಿ.ಪಂ. ಸಿಇಒ ಈಶ್ವರ ಕುಮಾರ ಕಾಂದೂ, ಜಿಲ್ಲಾ ಎಸ್ಪಿ ಪುಟ್ಟ ಮಾದಯ್ಯ ಎಂ., ಲಿಂಗಸುಗೂರು ಎಸಿ ಬಸವಣ್ಣಪ್ಪ ಕಲಶೆಟ್ಟಿ, ತಹಸೀಲ್ದಾರ್ ಅರುಣ ಹೆಚ್.ದೇಸಾಯಿ, ತಾ.ಪಂ. ಇಒ ಚಂದ್ರಶೇಖರ, ನಗರಸಭೆ ಪೌರಾಯುಕ್ತ ಪಾಂಡುರಂಗ ಇಟಗಿ, ಶಾಲಾ ಶಿಕ್ಷಣ ಇಲಾಖೆ (ಪ.ಪೂ) ಉಪನಿರ್ದೇಶಕರು ಸೋಮಶೇಖರಪ್ಪ ಹೊಕ್ರಾಣಿ, ಶಾಲಾ ಶಿಕ್ಷಣ ಇಲಾಖೆ (ಪ.ಪೂ) ಕ್ರೀಡಾ ವಿಭಾಗದ ಸಹಾಯಕ ನಿರ್ದೇಶಕ ಡಾ. ಗುಬ್ಬಿಗೂಡು ರಮೇಶ, ಜಿಲ್ಲಾ ಪದವಿ ಪೂರ್ವ ಕಾಲೇಜುಗಳ ಪ್ರಾಚಾರ್ಯರ ಸಂಘದ ಕಾರ್ಯದರ್ಶಿ ಡಾ. ಶಿವರಾಜ.ಎಸ್. ಜಿಲ್ಲಾ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘದ ಅಧ್ಯಕ್ಷ ನರಸಪ್ಪ ಭಂಡಾರಿ, ಪಾಟೀಲ್ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಆರ್.ಸಿ ಪಾಟೀಲ್. ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿವಿ ಸಿಂಡಿಕೇಟ್ ಸದಸ್ಯರು ಆರ್. ಅನಿಲ್ ಕುಮಾರ, ನೋಬಲ್ ಕಾಲೇಜ್ ಅಧ್ಯಕ್ಷ ಪರಶುರಾಮ ಮಲ್ಲಾಪುರ, ದೈಹಿಕ ಶಿಕ್ಷಣ ಉಪನ್ಯಾಸಕರ ಸಂಘದ ಅಧ್ಯಕ್ಷ ಬಸವರಾಜ, ಕಲ್ಯಾಣ ಕರ್ನಾಟಕ ದೈಹಿಕ ಶಿಕ್ಷಣ ಉಪನ್ಯಾಸಕರ ಸಂಘದ ಕಲಬುರಗಿಯ ಅಧ್ಯಕ್ಷ ಸಂತೋಷರೆಡ್ಡಿ ಸೇರಿದಂತೆ ಇನ್ನಿತರರು ಪಾಲ್ಗೊಳ್ಳುವರು ಎಂದು ತಿಳಿಸಿದ್ದಾರೆ.

## ಇಂದು ಭೋಗಾವತಿ ಶ್ರೀ ಬಸವೇಶ್ವರ ಜಾತ್ರಾ ಮಹೋತ್ಸವ

❑ ನೈಜ್ಯ ದೇಸೆ ನ್ಯೂಸ್

**ಮಾನ್ವಿ,: ಇಂದು ಭೋಗಾವತಿ ಶ್ರೀಬಸವೇಶ್ವರ ರಾಮಲಿಂಗೇಶ್ವರ ಜಾತ್ರಾ ಮಹೋತ್ಸವ ಜರುಗಲಿದ್ದು ಸಂಜೆ 5.30 ನಿ.ಕ್ಕೆ ಅತ್ಯಂತ ವಿಜೃಂಬಣೆಯಿಂದ ರಥ-ೋತ್ಸವ ಜರುಗುವುದು ಈ ಎಲ್ಲಾ ಭಕ್ತಿಪೂರ್ವಕ ಕಾರ್ಯಕ್ರಮದಲ್ಲು ಭೋಗಾವತಿ ಹಾಗೂ ಹಿರೇಕೊಟ್ನೆಕಲ್ ಮತ್ತು ಸುತ್ತಮುತ್ತಲಿನ ಗ್ರಾಮಗಳ ಅನೇಕ ಸಕಲ ಸದ್ಭಕ್ತರುಗಳು ಭಾಗವಹಿಸಿ ಶ್ರೀಬಸವೇಶ್ವರ ಕೃಪೆಗೆ ಪಾತ್ರರಾಗಬೇಕೆಂದು ಭೋಗಾವತಿ ಗ್ರಾಮದ ಸದ್ಭಕ್ತ ಮಂಡಳಿ, ಭೋಗಾವತಿ ಹಿರೇಕೊಟ್ನೆಕಲ್ ಹಾಗೂ ಸುತ್ತಮುತ್ತಲಿನ ಗ್ರಾಮದ ಸದ್ಭಕ್ತರು ಕೋರಿದ್ದಾರೆ.**

ನ.29 ಶನಿವಾರ ಬೆಳಿಗ್ಗೆ 8.45



ನಿ.ಕ್ಕೆ ಶ್ರೀಮಾರುತಿ ದೇವಸ್ಥಾನದದಿಂದ ಶ್ರೀ ಬಸವೇಶ್ವರ ದೇವಸ್ಥಾನದವರೆಗೆ ಕಳಸಾರೋಹಣ ಸಕಲ ವಾದ್ಯಗಳೊಂದಿಗೆ ಮೆರವಣಿಗೆ ಮತ್ತು ರಥೋತ್ಸವಕ್ಕೆ ಪೂಜೆ ಮತ್ತು ಕಳಸಾರೋಹಣ ಕಾರ್ಯಕ್ರಮಗಳು ತದನಂತರ ಎಲೆಪೂಜೆ ಮತ್ತು ಗಂಡಾರತಿ, ದೀಡ್ ನಮಸ್ಕಾರ, ರುದ್ರಾಭಿಷೇಕ, ಪಂಚಾಭಿಷೇಕ ಮತ್ತು ರಾಶಿ ನಕ್ಷತ್ರ ಪೂಜೆ ಕಾರ್ಯಕ್ರಮ ಜರುಗುತ್ತವೆ.

ಸಂಜೆ 5.30 ನಿ.ಕ್ಕೆ ಅತ್ಯಂತ ವಿಜೃಂಬಣೆಯಿಂದ ನೂತನ ಕಳಸಾರೋಹಣದೊಂದಿಗೆ ರಥೋತ್ಸವ ನಡೆಯುತ್ತದೆ. ರಾತ್ರಿ 9.ಗಂ.ಗೆ ಭಕ್ತಾದಿಗಳಿಂದ ಭಜನಾ ಕಾರ್ಯಕ್ರಮ ನೆರವೇರಲಿದೆ. ನ.30 ರವಿವಾರ ಸಾಯಂಕಾಲ ಕಡುಬಿನ ಕಾಳಗ ನಂತರ ಹೂ ಕಾಯಿ ಕರ್ಪೂರದೊಂದಿಗೆ ಮಹಾಮಂಗಲಗೊಳ್ಳುವುದು ಎಂದು ಆರ್ಚಕ ಬಸವರಾಜಪ್ಪ, ಭೋಗಾವತಿ ಗ್ರಾಮದ ಸದ್ಭಕ್ತ ಮಂಡಳಿ, ಭೋಗಾವತಿ ಹಿರೇಕೊಟ್ನೆಕಲ್ ಹಾಗೂ ಸುತ್ತಮುತ್ತಲಿನ ಗ್ರಾಮದ ಸದ್ಭಕ್ತರು ತಿಳಿಸಿದ್ದಾರೆ.

## ಹಸಮಕಲ್ ಶಾಲೆಗೆ ಎಸ್‌ಡಿಎಂಸಿ ನೂತನ ಪದಾಧಿಕಾರಿಗಳ ನೇಮಕ

❑ ನೈಜ್ಯ ದೇಸೆ ನ್ಯೂಸ್

**ಮಸ್ಕಿ: ತಾಲ್ಲೂಕಿನ ಹಸಮಕಲ್ ಗ್ರಾಮದ ಉನ್ನತೀಕರಿಸಿದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮೇಲ್ವೆಸ್ತುವಾರಿ ಸಮಿತಿಯ ನೂತನ ಪದಾಧಿಕಾ-ರಿಗಳನ್ನು ನೇಮಕ ಮಾಡಲಾಗಿದೆ ಎಂದು ಶಾಲೆ ಮುಖ್ಯ ಶಿಕ್ಷಕ ಅಮರೇಶ ಗುಡದೂರ ತಿಳಿಸಿದರು.**

ಶಾಲೆಯಲ್ಲಿ ಶುಕ್ರವಾರ ವಿದ್ಯಾರ್ಥಿಗಳ ಪಾಲಕ, ಪೋಷಕರ ಸಭೆ ನಡೆಸಿ ಸಭೆಯಲ್ಲಿ 2025-26ನೇ ಸಾಲಿನಿಂದ 3 ವರ್ಷದವರೆಗೆ ದುರುಗಪ್ಪ ನರಸಪ್ಪ (ಅಧ್ಯಕ್ಷರಾಗಿ), ನಾಗರತ್ನ ಮಂಜುನಾಥ (ಉಪಾಧ್ಯಕ್ಷರಾಗಿ), ಶಿವಮ್ಮ,



ನಾಗರಾಜ ಭೋವಿ, ಫಕೀರ ಸ್ವಾಮಿ, ರಜಿಯಾಬೇಗಂ, ಲತಾಶ್ರೀ, ವಿಶ್ವನಾಥ, ನಿರುಪಾದಿ, ಶಾಂತಮ್ಮ, ದುರುಗೇಶ, ದೇವರಡ್ಡಿ, ಬಸವರಾಜ, ಪಾರ್ವತಮ್ಮ, ಸಿದ್ದಮ್ಮ, ಗಂಗಮ್ಮ, ಗ್ಯಾನಪ್ಪ, ಪ್ರೇಮಾ (ಸದಸ್ಯರು) ಗಳನ್ನಾಗಿ ನೇಕಮ ಮಾಡಲಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಸಹ ಶಿಕ್ಷಕರಾದ ಸುಮಂಗಲಾ, ಯಲ್ಲಮ್ಮ, ಸತ್ಯಮಣಿ, ಪವಿತ್ರಾ, ಎಸ್‌ಡಿಎಂಸಿ ಮಾಜಿ ಅಧ್ಯಕ್ಷ ಹುಲಗಪ್ಪ, ಯಂಕಪ್ಪ, ವೀರಭದ್ರಯ್ಯ ಸ್ವಾಮಿ ಸೇರಿದಂತೆ ವಿದ್ಯಾರ್ಥಿಗಳು ಮತ್ತು ಪಾಲಕರಿದ್ದರು.

## ಪುರುಷರು ಸಹ ಸುಲಭವಾದ ಎನ್‌ಎಸ್‌ವಿ ಸಂತಾನ ನಿರೋಧ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳಲು ಅವಕಾಶವಿದೆ:ಡಾ ಶಿವಕುಮಾರ್ ನಾರಾ ಸಲಹೆ

❑ ನೈಜ್ಯ ದೇಸೆ ನ್ಯೂಸ್

**ರಾಯಚೂರು ನವೆಂಬರ್ 28 (ಕರ್ನಾಟಕ ವಾರ್ತೆ): ಜೀವನದಲ್ಲಿ ದಾಂಪತ್ಯ ಜೀವನಕ್ಕೆ ಬಹಳಷ್ಟು ಮಹತ್ವ ನೀಡುವ ನಾವೆಲ್ಲರೂ ಚಿಕ್ಕ ಕುಟುಂಬಕ್ಕಾಗಿ ಮಕ್ಕಳ ಜನನದ ಸಂಪೂರ್ಣ ನಿಯಂತ್ರಣಕ್ಕಾಗಿ ಮಹಿಳೆಯರು ಮಾತ್ರ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳುತ್ತಿದ್ದಾರೆ.**

ದಂಪತಿಯು ನಿರ್ಧಾರ ಕೈಗೊಂಡಲ್ಲಿ ಪುರುಷರಿಗೆ ಇರುವ ಸರಳ ವಿಧಾನವಾದ ಎನ್‌ಎಸ್‌ವಿ (ನೋ ಸ್ಕಾಲ್‌ಪೇಲ್ ವ್ಯಾಸೆಕ್ಟುಮಿ) ಶಸ್ತ್ರಚಿಕಿತ್ಸೆಯನ್ನು ಮಾಡಿಸುವ ಮೂಲಕ ಸಂತಸದ ಕುಟುಂಬ ಹೊಂದಲು ಅವಕಾಶವಿದ್ದು, ರಾಯಚೂರು ಜಿಲ್ಲೆಯ ಎಲ್ಲ ತಾಲೂಕು ಸಾರ್ವಜನಿಕ ಆಸ್ಪತ್ರೆಗಳಲ್ಲಿ, ರಿಮ್ಸ್‌ನಲ್ಲಿ ಶಸ್ತ್ರಚಿಕಿತ್ಸೆ ಮಾಡಲಾಗುತ್ತಿದ್ದು ಇದರ ಸದುಪಯೋಗ ಪಡೆದುಕೊಳ್ಳಬಹುದಾಗಿದೆ ಎಂದು ಜಿಲ್ಲಾ ಕುಟುಂಬ ಕಲ್ಯಾಣ ಕಾರ್ಯಕ್ರಮ ಅನುಷ್ಠಾನ ಅಧಿಕಾರಿ ಡಾ. ಶಿವಕುಮಾರ ನಾರಾ ವಿನಂತಿಸಿದರು.



ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ರಾಷ್ಟ್ರೀಯ ಕುಟುಂಬ ಕಲ್ಯಾಣ ಕಾರ್ಯಕ್ರಮದಡಿಯಲ್ಲಿ ರಾಯಚೂರು ನಗರದ ತಾಯಿ ಮಕ್ಕಳ ಆಸ್ಪತ್ರೆಯಲ್ಲಿ ನವೆಂಬರ್ 28ರಂದು ಹಮ್ಮಿಕೊಂಡ "ನೋ ಸ್ಕಾಲ್‌ಪೇಲ್ ವ್ಯಾಸೆಕ್ಟುಮಿ" (ಎನ್‌ಎಸ್‌ವಿ) ಶಸ್ತ್ರಚಿಕಿತ್ಸೆ ಕುರಿತ ಜಾಗೃತಿ ಪಾಕ್ಷಿಕ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ಪುರುಷರಿಗೆ ಸಂತಾನ ನಿರೋಧ ಶಸ್ತ್ರಚಿಕಿತ್ಸೆ ಮಾಡಿಸಿದರೆ ಪುರುಷತ್ವಕ್ಕೆ ದಕ್ಕೆ ಬರುವುದೆಂಬ ತಪ್ಪು ನಂಬಿಕೆಗಳಿರುವುದರಿಂದ ದಂಪತಿಗಳು ಮಕ್ಕಳು ಬೇಡವೆಂದು ನಿರ್ಧರಿಸಿದಾಗ ಕೇವಲ ಮಡದಿಗೆ ಮಾತ್ರ ಲ್ಯಾಪರೊಸ್ಕೋಪಿಕ್ ಅಥವಾ ಟ್ಯುಬೆಕ್ಟುಮಿ ಶಸ್ತ್ರಚಿಕಿತ್ಸೆ ಮಾಡಿಸುವುದು



ವಾಡಿಕೆಯಾಗಿದೆ. ದಯವಿಟ್ಟು ತಪ್ಪು ನಂಬಿಕೆಗಳನ್ನು ನಂಬದೆ ಅತ್ಯಂತ ಸರಳ-ಸುಲಭವಾದ "ನೋ ಸ್ಕಾಲ್‌ಪೇಲ್ ವ್ಯಾಸೆಕ್ಟುಮಿ" (ಎನ್‌ಎಸ್‌ವಿ) ಶಸ್ತ್ರಚಿಕಿತ್ಸೆಗೆ ಪತಿಯು ಸಹ ಮುಂದೆ ಬರುವ ನಿರ್ಧಾರ ಕೈಗೊಳ್ಳಬೇಕು ಎಂದು ತಿಳಿಸಿದರು.

ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿ ಡಾ. ಮಹಮ್ಮದ್ ಶಾಕೀರ್ ಮೋಹಿಯುದ್ದಿನ್ ಮಾತನಾಡಿ, ಮುಖ್ಯವಾಗಿ ಪತ್ನಿಯು ಗಂಡಾಂತರ ಗರ್ಭಿಣಿಯೆಂದು ನಿರ್ಧರಿಸುವ ಅಂಶಗಳಾದ 30 ವರ್ಷ ವಯಸ್ಸಿನ ನಂತರ ಗರ್ಭಿಣಿಯಾದಲ್ಲಿ, ಎತ್ತರ 142 ಸೆಂ.ಮೀ. ಗಿಂತ ಕಡಿಮೆ ಇದ್ದಲ್ಲಿ, ಸಕ್ಕರೆ ಖಾಯಿಲೆ ಅಥವಾ ರಕ್ತದೊತ್ತಡ 140/90 ಗಿಂತ ಹೆಚ್ಚು ಇದ್ದಲ್ಲಿ, ಅವಳಿ-ಜವಳಿ ಮಕ್ಕಳಾದಲ್ಲಿ, ಹೆರಿಗೆ ಶಸ್ತ್ರಚಿಕಿತ್ಸೆ ಮೂಲಕವಾದಲ್ಲಿ ಅಥ-ವಾ ಯಾವುದಾದರೂ ಕಾಯಿಲೆಗೆ ದೀರ್ಘಾವಧಿ ಚಿಕಿತ್ಸೆ ಪಡೆಯುತ್ತಿದ್ದರೆ ಅವರ ಪತಿಯು ಎಸ್-ಎಸ್‌ವಿ ಶಸ್ತ್ರಚಿಕಿತ್ಸೆ ಮಾಡಿಸಲು ಮುಂದೆ ಬರಬೇಕು. ಅಲ್ಲದೆ ಇದಕ್ಕಾಗಿ ರೂಪಾಯಿ 1100 ಪ್ರೋತ್ಸಾಹ ಧನವಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ತಾಯಿ ಮಕ್ಕಳ ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿ ಡಾ ಪ್ರಜ್ವಲ್‌ಕುಮಾರ್, ಪ್ರಸೂತಿ ತಜ್ಞರಾದ ಶಾಲಿನಿ, ರೆಡಿಯಾಲಜಿಸ್ಟ್ ಭುವನೇಶ್ವರಿ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ, ಉಪ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಬಸಯ್ಯ, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ನಾಗರಾಜ್, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಅಮರೇಶ ಗಡ್ಡಿ, ಸೇರಿದಂತೆ ಸಿಬ್ಬಂದಿ ವರ್ಗ, ಸಾರ್ವಜನಿಕರು ಉಪಸ್ಥಿತರಿದ್ದರು

## ಸಾಹಿತ್ಯ ಸಿಂಚನ

ನಾನು ಹೂವೆಂದು ಭಾವಿಸಿ ಹೂವಿನಂತೆ ಇದ್ದೇನೆ,
ಎಂದು ಮುಂದೆ ಸಾಗು ನೀನು ನಿಜವಾಗಿಯು
ಹೂವಿನಂತೆ ಆಗುವೆ ಓ ಮನಸೇ.....

ನಾನು ಮುಳ್ಳು ಎಂದು ಭಾವಿಸಿ ನಡೆದರೆ ನೀನು
ಮುಳ್ಳೇ.... ಎಂದೇ ಭಾವಿಸಿ
ನೋಡುವರು ಜನರು ನಿನಗೆ ಓ ಮನಸೇ ...

ನಾನು ಎಲ್ಲರ ಜೊತೆ ನಿಯತ್ತಾಗಿ,
ಸೇವೆ, ಕರ್ತವ್ಯ ಮಾಡುವೆ ಎಂದರೆ ಸಕಾಲದವರೆಗೆ
ನೀನು ಉಳಿದಿರುವೆ ಓ ಮನಸೇ ...

ಮನಸಿದ್ದರೆ ಮಾರ್ಗ ಎಂಬ ಗಾದೆ ಸುಳ್ಳಲ್ಲ
ಮನಸ್ಸಿನಂತೆ ನೀನು ನಡೆಯುವೆ
ಮನಸ್ಸಿಗೆ ಜಾಸ್ತಿ ಆಸೆಗಳು ಬೇಡ ಓ ಮನವೇ

ಮನಸ್ಸಿಗೆ ಎಂದಿಗೂ ಮಾರ್ಗ ತೋರಿಸು ಎಂಬ
ಮನಸ್ಸಿರಬೇಕು....
ಮನಸ್ಸು ನಿನಗೆ ಸದಾ ಕಾಲ ಸದಾ ಜೊತೆಯಾಗಿರುತ್ತೆ,
ಇದು ನಿನ್ನ ಮನಸ್ಸು ಮನುಜ

ಯಾಸೀನಾ ಇರ್ಫಾನ್ ಸಿಂಧನೂರ

## ಕರ್ನಾಟಕ ವಿಧಾನ ಪರಿಷತ್ ಈಶಾನ್ಯ ಶಿಕ್ಷಕರ ಕ್ಷೇತ್ರದ ಚುನಾವಣೆಯ ಕರಡು ಮತದಾರರ ಪಟ್ಟಿ ಪ್ರಕಟ

❏ ನೈಜ್ಯ ದೆಸೆ ನ್ಯೂಸ್

**ರಾಯಚೂರು: (ಕರ್ನಾಟಕ ವಾರ್ತೆ): ಕರ್ನಾಟಕ ವಿಧಾನ ಪರಿಷತ್ ಈಶಾನ್ಯ ಶಿಕ್ಷಕರ ಕ್ಷೇತ್ರದ ಚುನಾವಣೆಯ ಕರಡು ಮತದಾರರ ಪಟ್ಟಿಯನ್ನು ಪ್ರಚುರಪಡಿಸುವುದಕ್ಕೆ ಸಂಬಂಧಿಸಿದಂತೆ ಚರ್ಚಿಸಲು ಅಪರ ಜಿಲ್ಲಾಧಿಕಾರಿಗಳಾದ ಶಿವಾನಂದ ಅವರ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ನವೆಂಬರ್ 27ರಂದು ರಾಜಕೀಯ ಪಕ್ಷಗಳ ಪ್ರತಿನಿಗಳೊಂದಿಗೆ ಸಭೆ ನಡೆಯಿತು.**

ಈ ವೇಳೆ ಮಾತನಾಡಿದ ಅಪರ ಜಿಲ್ಲಾಧಿಕಾರಿಗಳು, ಭಾರತ ಚುನಾವಣಾ ಆಯೋಗವು ದಿನಾಂಕ 12.09.2025ರಂದು ಹೊರಡಿಸಿದ ವೇಳಾಪಟ್ಟಿಗನುಗುಣವಾಗಿ ಕರ್ನಾಟಕ ವಿಧಾನ ಪರಿಷತ್ ಈಶಾನ್ಯ ಶಿಕ್ಷಕರ ಕ್ಷೇತ್ರದ ಚುನಾವಣೆಯ ಕರಡು ಮತದಾರರ ಪಟ್ಟಿಯನ್ನು



ಪ್ರಚುರಪಡಿಸಲಾಗಿದೆ ಎಂದು ತಿಳಿಸಿದರು. ಈ ಕರಡು ಮತದಾರರ ಪಟ್ಟಿಯ ಭೌತಿಕ ಪ್ರತಿಯು ಸಂಬಂಧಪಟ್ಟ ಕ್ಷೇತ್ರದ ವ್ಯಾಪ್ತಿಯ ಎಲ್ಲಾ ಸಹಾಯಕ ಮತದಾರರ ನೋಂದಣಾಧಿಕಾರಿಗಳಾದ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ, ಮಹಾನಗರ ಪಾಲಿಕೆಯ ಆಯುಕ್ತರು ಹಾಗೂ ತಹಸೀಲ್ದಾರ ಕಚೇರಿಯಲ್ಲಿ ಲಭ್ಯವಿದ್ದು ಮತದಾರರು ಪರಿಶೀಲಿಸಿಕೊಳ್ಳಬಹುದಾಗಿದೆ.

ಇದನ್ನು ಹೊರತುಪಡಿಸಿಯು ಸಹ ಸರ್ಕಾರದ ಅಧಿಕೃತ ಅಂರ್ತಜಾಲದಲ್ಲಿಯು ಸಹ ಮಾಹಿತಿಗಾಗಿ ಲಭ್ಯವಿದ್ದು ಇದನ್ನು ಮತದಾರರು ಅವಲೋಕಿಸಿಕೊಳ್ಳಬಹುದಾಗಿದೆ ಎಂದು ತಿಳಿಸಿದರು.

ಹೀಗೆ ಪಚುರಪಡಿಸಲಾದ ಕರಡು ಮತದಾರರ ಪಟ್ಟಿಯಲ್ಲಿ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಸಂಬಂಧಪಟ್ಟ ಮತದಾರರು ಲಿಖಿತವಾಗಿ ಆಯಾ ಸಹಾಯಕ ಮತದಾರರ ನೋಂದಣಾಧಿಕಾರಿಗಳಿಗೆ ಆಕ್ಷೇಪಣೆಯನ್ನು ಡಿಸೆಂಬರ್ 10ರವರೆಗೆ ಸಲ್ಲಿಸಬಹುದೆಂದು ಸಾರ್ವಜನಿಕರಿಗೆ ತಿಳಿಯಪಡಿಸಿದೆ ಎಂದರು.

ಇದನ್ನು ಹೊರತುಪಡಿಸಿಯು ಸಹ ಇದೊಂದು ನಿರಂತರ ನೋಂದಣಿ ಪ್ರಕ್ರಿಯೆಯಾಗಿರುವ ಹಿನ್ನೆಲೆಯಲ್ಲಿ, ನಾಮಪತ್ರ ಸಲ್ಲಿಸುವ ಕೊನೆಯ ದಿನಾಂಕದವರೆಗೂ ಅರ್ಹ ಮತದಾರರು ಅವಶ್ಯಕ ದಾಖಲೆಗಳೊಂದಿಗೆ ತಮ್ಮ ಹೆಸರನ್ನು ಮತದಾರರ ಪಟ್ಟಿಯಲ್ಲಿ ನೋಂದಾಯಿಸಿಕೊಳ್ಳಲು ಅವಕಾಶವಿರುತ್ತದೆಂದು ಅಪರ ಜಿಲ್ಲಾಧಿಕಾರಿಗಳು ಸಭೆಯ ಮೂಲಕ ಸಾರ್ವಜನರಿಕರಿಗೆ ತಿಳಿಸಿದರು. ಸಭೆಯಲ್ಲಿ ವಿವಿಧ ರಾಜಕೀಯ ಪಕ್ಷಗಳು ಪ್ರತಿನಿಧಿಗಳು, ಚುನಾವಣೆಯ ಶಾಖೆಯ ಶಿರಸ್ತೇದಾರರು ಇದ್ದರು.

## ಕೈಗಾರಿಕೋದ್ಯಮಿಗಳಿಗೆ ಅರಿವು ಮೂಡಿಸುವ ಕಾರ್ಯಾಗಾರ 29ಕ್ಕೆ

❏ ನೈಜ್ಯ ದೆಸೆ ನ್ಯೂಸ್

**ರಾಯಚೂರು: (ಕರ್ನಾಟಕ ವಾರ್ತೆ): 2025-26ನೇ ಸಾಲಿನ ರ್‍ಯಾಂಪ್ ಯೋಜನೆಯಡಿ ಟ್ರೇಡ್ಸ್ ಅಂಡ್ ಈಎಸ್‌ಎಂ ಯೋಜನೆ ಕುರಿತು ಕೆಎಸ್‌ಎಂಸಿ ಬೆಂಗಳೂರು ಹಾಗೂ ಜಿಲ್ಲಾ ಕೈಗಾರಿಕಾ ಕೇಂದ್ರ, ರಾಯಚೂರು ಇವರ ಸಂಯುಕ್ತಾಶ್ರಯದಲ್ಲಿ ಜಿಲ್ಲೆಯ ಕೈಗಾರಿಕೋದ್ಯಮಿಗಳಿಗೆ ಒಂದು ದಿನದ ಅರಿವು ಮೂಡಿಸುವ ಕಾರ್ಯಕ್ರಮವು ನಗರದ ರಂಜಿತಾ ಪ್ಯಾಲೇಸ್‌ನ ಸಭಾಂಗಣದಲ್ಲಿ ನವೆಂಬರ್ 29ರ ಬೆಳಿಗ್ಗೆ 10.30ಕ್ಕೆ ಹಮ್ಮಿಕೊಳ್ಳಲಾಗಿದೆ.**

ಜಿಲ್ಲೆಯಲ್ಲಿರುವ ಎಲ್ಲಾ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕಾ ಘಟಕಗಳ ಮುಖ್ಯಸ್ಥರು ಹಾಗೂ ಉದ್ಯಮಿಗಳು ಈ ಕಾರ್ಯಾಗಾರದಲ್ಲಿ ಭಾಗವಹಿಸಿ ಕಾರ್ಯಕ್ರಮದ ಸದುಪಯೋಗ ಪಡೆಯುವಂತೆ ಕೋರಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಹಾಯಕ ನಿರ್ದೇಶಕರಾದ ಲಕ್ಷ್ಮೀಕಾಂತ ಕುಲಕರ್ಣಿ, ದೂರವಾಣಿ ಸಂಖ್ಯೆ; 8861241093ಗೆ ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮಾವಿನಕೆರೆ ಉದ್ಯಾನವನಕ್ಕೆ ಸಾರ್ವಜನಿಕ ಪ್ರವೇಶಕ್ಕೆ ನಿರ್ಬಂಧ

❏ ನೈಜ್ಯ ದೆಸೆ ನ್ಯೂಸ್

**ರಾಯಚೂರು ನವೆಂಬರ್ 28 (ಕರ್ನಾಟಕ ವಾರ್ತೆ): ನಗರದ ಮಹಾನಗರ ಪಾಲಿಕೆ ವ್ಯಾಪ್ತಿಯ ಮಾವಿನಕೆರೆ ಉದ್ಯಾನವನದಲ್ಲಿ ವಿವಿಧಅಭಿವೃದ್ಧಿಹಾಗೂಸೌಂದರ್ಯವರ್ಧಕಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿರುವ ಹಿನ್ನೆಲೆ, ಉದ್ಯಾನವನ್ನು ತಾತ್ಕಾಲಿಕವಾಗಿ ಸಾರ್ವಜನಿಕ ಪ್ರವೇಶಕ್ಕೆ ನಿರ್ಬಂಧ ಹೇರಲು ತೀರ್ಮಾನಿಸಿದೆ. ಸದರಿ ಉದ್ಯಾನವನದಲ್ಲಿ ರಸ್ತೆ ನಿರ್ಮಾಣ, ಕಾಲುದಾರಿ ಇಂಟರ್ಲಾಕಿಂಗ್, ಬೇಲಿ ಕಾಮಗಾರಿಗಳು, ಅಲಂಕಾರಿಕ ವಿದ್ಯುತ್ ಕಂಬಗಳ ಸ್ಥಾಪನೆ ಸೇರಿದಂತೆ ಹಲವು ಅಭಿವೃದ್ಧಿ ಕಾಮಗಾರಿಗಳು ಮುಂದಿನ ದಿನಗಳಲ್ಲಿ ನಡೆಯಲಿವೆ.**

ಈ ಹಿನ್ನೆಲೆಯಲ್ಲಿ ನವೆಂಬರ್ 29 ರಿಂದ ಮುಂದಿನ ಮೂರು ತಿಂಗಳುಗಳ ಕಾಲ ಮಾವಿನಕೆರೆಯ ಕಾಮಗಾರಿಗಳನ್ನು ಸುರಕ್ಷಿತವಾಗಿ ಮತ್ತು ತಾಂತ್ರಿಕವಾಗಿ ನೆರವೇರಿಸಲು ಸಾರ್ವಜನಿಕರ ಪ್ರವೇಶವನ್ನು ನಿಯಂತ್ರಿಸುವುದು ಅಗತ್ಯವಿದ್ದು, ಮಾವಿನಕೆರೆ ಪಬ್ಲಿಕ್ ಗಾರ್ಡನ್ ಉದ್ಯಾನವನಕ್ಕೆ ಸಾರ್ವಜನಿಕರ ಪ್ರವೇಶವನ್ನು ತಾತ್ಕಾಲಿಕವಾಗಿ ನಿಷೇಧಿಸಲಾಗಿದೆ. ಕಾಮಗಾರಿಗಳ ಅವಧಿಯಲ್ಲಿ ನಾಗರಿಕರು ಸಹಕಾರ ನೀಡುವಂತೆ ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೋಹಪಾತ್ರ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## 5 ಸಾವಿರ ಅಂಗನವಾಡಿಶಾಲೆಗಳಲ್ಲಿ ಎಲ್‌ಕೆಜಿ, ಯುಕೆಜಿ ಅಕ್ಕಾಪಡೆ, ಗೃಹಲಕ್ಷ್ಮಿ ಸಂಘಕ್ಕೆ ಚಾಲನೆ



❏ ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ರಾಜ್ಯದಲ್ಲಿ ಅಕ್ಕಾಪಡೆ,ಗೃಹ ಲಕ್ಷ್ಮಿಸಂಘ ಸ್ಥಾಪನೆ ಹಾಗೂ ರಾಜ್ಯಾದ್ಯಂತ 5ಸಾವಿರ ಅಂಗನವಾಡಿಗಳಲ್ಲಿ ಎಲ್‌ಕೆಜಿ,ಯುಕೆಜಿ ಆರಂಭಕ್ಕೆ ಇಂದು ಚಾಲನೆ ನೀಡಲಾಯಿತು.**

ಬೆಂಗಳೂರಿನ ಅರಮನೆ ಮೈದಾನಲ್ಲಿಂದು ನಡೆದ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯ (ಐಸಿಡಿಎಸ್) ಸುವರ್ಣಮಹೋತ್ಸವ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಮಹಿಳಾ ಮತ್ತುಕಲ್ಯಾಣ ಇಲಾಖೆಯ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ರವರು ಅಕ್ಕಾಪಡೆ, ಗೃಹಲಕ್ಷ್ಮಿ ಸಂಘ ಸ್ಥಾಪನೆ ಹಾಗೂ ಅಂಗನವಾಡಿಗಳಲ್ಲಿ ಎಲ್‌ಕೆಜಿ,ಯುಕೆಜಿ ಆರಂಭದ ಘೋಷಣೆ ಮಾಡಿದರು. ಮಹಿಳೆಯರು, ಮಕ್ಕಳಿಗೆ ಸುರಕ್ಷತೆ, ರಕ್ಷಣೆ ಒದಗಿಸಲು ದೇಶದಲ್ಲೇ ಮೊದಲಬಾರಿಗ ಅಕ್ಕಾಪಡೆ ಯೋಜನೆಯನ್ನು ರಾಜ್ಯದಲ್ಲ ಜಾರಿಗೊಳಿಸಲಾಗುತ್ತಿದೆ.

ಹಾಗೆಯೇ ಗೃಹ ಲಕ್ಷ್ಮಿಯೋಜನೆಯ 1 ಕೋಟಿ 24 ಲಕ್ಷದ 12 ಸಾವಿರ ಫಲಾನುಭವಿಗಳಿಗಾಗಿ ಗೃಹಲಕ್ಷ್ಮಿ ವಿವಿಧೋದ್ದೇಶ ಸಹಕಾರಿ ಸಂಘ ಸ್ಥಾಪಿಸಲಾಗಿದೆ. ಯೋಜನೆಯ ಸದಸ್ಯರೇ ಈ ಸಂಘದ ಷೇರುದಾರರಾಗಿದ್ದು, ಮಹಿಳೆಯರಿಗೆ ಗೃಹಲಕ್ಷ್ಮಿ ಸಂಘದ ಮೂಲಕ ಸಾಲ ಸೌಲಭ್ಯ ಒದಗಿಸಲಾಗುತ್ತೆದೆ. ಇದರ ಜತೆಗೆರಾಜ್ಯದ ಐದು ಸಾವಿರ ಅಂಗನವಾಡಿಗಳಲ್ಲಿ ಎಲ್‌ಕೆಜಿ, ಯುಕೆಜಿ ಆರಂಭಿಸುವ ಯೋಜನೆಗೂ ಚಾಲನೆ ನೀಡಲಾಗಿದೆ. ಇದರಿಂದ 1 ಲಕ್ಷಕ್ಕೂ ಹೆಚ್ಚು ಮಕ್ಕಳಿಗೆ ಪ್ರಯೋಜನವಾಗಲಿದೆ.

ಈ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ಧರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವರುಗಳಾದ ಡಾ.ಹೆಚ್.ಸಿ.ಮಹದೇವಪ್ಪ, ಲಕ್ಷ್ಮಿ ಹೆಬ್ಬಾಳ್ಕರ್, ಈಶ್ವರಖಂಡ್ರೆ, ಕೆ.ಹೆಚ್.ಮುನಿಯಪ್ಪ, ಮಾಜಿ ರಾಜ್ಯಪಾಲೆ ಮಾರ್ಗರೇಟ್ ಆಳ್ವ, ಮಾಜಿ ಸಚಿವರಾದ ರಾಣಿಸತೀಶ್, ಮೋಟಮ್ಮ, ಕೆಪಿಸಿಸಿ ಮಹಿಳಾ ಮೋರ್ಚಾ ವಿಭಾಗದ ಅಧ್ಯಕ್ಷೆ ಸೌಮ್ಯಾರೆಡ್ಡಿ, ಶಾಸಕಿ ರೂಪಕಲಾ, ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮಿ ಚೌದರಿ ಸೇರಿದಂತೆ ಹಲವು ಸಚಿವರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಕಲ್ಯಾಣ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು. ಅರಮನೆ ಮೈದಾನದಲ್ಲಿ ನಡೆದ ಈಕಾರ್ಯಕ್ರಮದಲ್ಲಿ ಭಾರಿ ಜನಸ್ತೋಮವೇ ನೆರದಿತ್ತು.

## ಜೋಳ ಖರೀದಿ ಗುರಿ ಇಳಿಕೆ: ಸರ್ಕಾರದ ಕ್ರಮದ ವಿರುದ್ಧ ರೈತರ ಆಕ್ರೋಶ

❏ ನೈಜ್ಯ ದೆಸೆ ನ್ಯೂಸ್

**ಮಾನ್ವಿ: ತಾಲೂಕಿನ ಅತಿ ಹೆಚ್ಚು ಜೋಳ ಬೆಳೆಯುವ ಪೋತ್ನಾಳ್ ಹೋಬಳಿಯಲ್ಲಿ ಜೋಳ ಖರೀದಿ ಕೇಂದ್ರವನ್ನು ತೆರೆಯಬೇಕು ಹಾಗೂ ಸರ್ಕಾರದ ಬೆಂಬಲ ಬೆಲೆ ಯೋಜನೆಯಡಿ ಜೋಳದ ಖರೀದಿ ಪ್ರಮಾಣವನ್ನು ಕಳೆದ ಬಾರಿಯಂತೆ ಹೆಚ್ಚಿಸಬೇಕೆಂದು ಕರ್ನಾಟಕ ರಾಜ್ಯ ಅನ್ನದಾತ ರೈತ ಸಂಘ ಹಾಗೂ ತಾಲೂಕಿನ ಜೋಳಬೆಳೆಗಾರರ ಸಂಘದ ಅಧ್ಯಕ್ಷರಾದ ನಾಗನಗೌಡ ಒತ್ತಾಯಿಸಿದರು.**

ಪಟ್ಟಣದ ಪತ್ರಿಕಾ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಾಲೂಕಿನಲ್ಲಿ ಅತಿವೃಷ್ಠಿಯಿಂದಾಗಿ ಈಗಾಗಲೇ ಜೋಳದ ಇಳುವರಿ ಕುಸಿತ ಕಂಡಿದೆ.




ಇದರ ನಡುವೆ ಜಿಲ್ಲಾಡಳಿತದ ಅವೈಜ್ಞಾನಿಕ ತೀರ್ಮಾನಗಳಿಂದ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ತಾಲೂಕಿನಲ್ಲಿ ಅತಿ ಹೆಚ್ಚು ಜೋಳ ಬೆಳೆಯುವ ಪ್ರದೇಶ ಪೋತ್ನಾಳ್ ಹೋಬಳಿಯಾಗಿದೆ. ಆದರೆ, ಜಿಲ್ಲಾಡಳಿತವು ಇಲ್ಲಿ ಖರೀದಿ ಕೇಂದ್ರ ತೆರೆಯದೆ, ಜೋಳ ಬೆಳೆಯದ ಕುರ್ಡಿ ಭಾಗದಲ್ಲಿ ಹಾಗೂ ಮಾನ್ವಿಯ ಜಾನೆಕಲ್ ಮತ್ತು ಟಿ.ಎ.ಪಿ.ಎಂ.ಎಸ್.ಗಳಲ್ಲಿ ಮಾತ್ರ ಕೇಂದ್ರಗಳನ್ನು ತೆರೆದಿದೆ. ಇದರಿಂದಾಗಿ ಪೋತ್ನಾಳ್ ಭಾಗದ ರೈತರು ನೋಂದಣಿ ಮತ್ತು ಮಾರಾಟಕ್ಕಾಗಿ ದೂರದ ಕೇಂದ್ರಗಳಿಗೆ ಬೆಳೆಯನ್ನು ಸಾಗಿಸಬೇಕಾಗಿದೆ. ಅಲ್ಲದೆ, ಅಲ್ಲಿ ಸರತಿ ಸಾಲಿನಲ್ಲಿ ದಿನಗಟ್ಟಲೆ ಕಾಯಬೇಕಾದ ಪರಿಸ್ಥಿತಿ ನಿರ್ಮಾಣವಾಗಿದ್ದು, ಇದು ರೈತರಿಗೆ ಆರ್ಥಿಕ ನಷ್ಟವನ್ನು ಉಂಟುಮಾಡುತ್ತಿದೆ ಎಂದು ಅವರು ದೂರಿದರು.

ಮುಂದುವರೆದು ಮಾತನಾಡಿದ ಅವರು, ಕಳೆದ ಬಾರಿ ಸರ್ಕಾರ ಬೆಂಬಲ ಬೆಲೆಯಲ್ಲಿ ತಾಲೂಕಿನಿಂದ 2.25 ಲಕ್ಷ ಮೆಟ್ರಿಕ್ ಟನ್ ಜೋಳ ಖರೀದಿಸಿತ್ತು. ಆದರೆ, ಈ ಬಾರಿ ಈ ಗುರಿಯನ್ನು ಕೇವಲ 88 ಸಾವಿರ ಮೆಟ್ರಿಕ್ ಟನ್‌ಗೆ ಇಳಿಸಲಾಗಿದೆ. ಇದರಿಂದ ರೈತರಿಗೆ ತೀವ್ರ ಅನ್ಯಾಯವಾಗಲಿದ್ದು, ಕಳೆದ ಬಾರಿಯಷ್ಟೇ ಪ್ರಮಾಣವನ್ನು ಈ ಬಾರಿಯೂ ಖರೀದಿಸಬೇಕು ಹಾಗೂ ರೈತರ ಜಮೀನಿನಲ್ಲಿ ಬೆಳೆದಿರುವ ಜೋಳದ ಬೆಳೆಯನ್ನು ಸಮರ್ಪಕವಾಗಿ ಜಿ.ಪಿ.ಎಸ್ (GPS) ಮಾಡಬೇಕು ಎಂದು ಆಗ್ರಹಿಸಿದರು. ಈ ಸಂದರ್ಭದಲ್ಲಿ ರೈತ ಮುಖಂಡರಾದ ದುರುಗಪ್ಪ ತಡಕಲ್, ರಾಮನಗೌಡ, ಮಹಾದೇವಪ್ಪ, ಶರಣೇಗೌಡ ಹಾಗೂ ಅಮರೇಗೌಡ ಉಪಸ್ಥಿತರಿದ್ದರು.

## ಮಕ್ಕಳ ಪ್ರತಿಭೆ ಹೊರ ತರಲು ಪ್ರತಿಭಾ ಕಾರಂಜಿ ಸಹಾಯಕ: ಮಾರ್ಟಿನ್ ಅಮಲರಾಜ್



❏ ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರು: ತಾಲೂಕಿನ ಅಡವಿಬಾವಿ ಕೆ. ಶಾಲೆಯಲ್ಲಿ ಈಚನಾಳ ಸಿ.ಆರ್.ಸಿ ಮಟ್ಟದ ಪ್ರತಿಭಾ ಕಾರಂಜಿ ಕಾರ್ಯಕ್ರಮ ಶುಕ್ರವಾರ ಜರುಗಿತು.**

**ಕಾರ್ಯಕ್ರಮದಲ್ಲಿ ಉದ್ಘಾಟಕರಾಗಿ ಭಾಗವಹಿಸಿದ ಲಿಂಗಸಗೂರು ತಾಲ್ಲೂಕು ಅಕ್ಷರ ದಾಸೋಹ ನಿರ್ದೇಶಕರಾದ ಮಾರ್ಟಿನ್ ಅಮಲರಾಜ್ " ಮಕ್ಕಳ ಪ್ರತಿಭೆ ಹೊರ ಹೊಮ್ಮಲು ಪ್ರತಿಭಾ ಕಾರಂಜಿ ಮತ್ತು ಕಲೋತ್ಸವ ಕಾರ್ಯಕ್ರಮಗಳು ಅತ್ಯುತ್ತಮ ವೇದಿಕೆ ಒದಗಿಸುತ್ತವೆ, ಮಕ್ಕಳು ಇದರ ಸದುಪಯೋಗ ಪಡೆದುಕೊಳ್ಳಬೇಕು ಮತ್ತು ಶಿಕ್ಷಕರು ಈ ಕಾರ್ಯಕ್ರಮ ಇದ್ದಾಗ ಮಾತ್ರ ಸಿದ್ಧತೆ ಮಾಡದೆ ವರ್ಷದ ಪ್ರತೀ ಕಲಿಕಾ ದಿನವೂ ಮಕ್ಕಳ ಪ್ರತಿಭೆ ಅನಾವರಣಕ್ಕೆ ಅವಕಾಶ ಮಾಡಿಕೊಡಬೇಕು" ಎಂದು ಹೇಳಿದರು.**

ನಂತರ ಮಾತಾಡಿದ ವಲಯ ಸಿ.ಆರ್.ಪಿ ಮುಕ್ತುಂಸಾಬ ತಾಳಿಕೋಟಿ "ಇಪ್ಪತ್ತೊಂದು ಶಾಲೆಯ ಮಕ್ಕಳು ಮೂವತ್ತಮೂರು ಸ್ಪರ್ಧೆಗಳಲ್ಲಿ ಭಾಗವಹಿಸುತ್ತಿದ್ದು ನಿರ್ಣಾಯಕರ ನಿರ್ಣಯ ಪಾರದರ್ಶಕವಾಗಿರಲಿ, ಇಲ್ಲಿ ಗೆದ್ದ ಮಕ್ಕಳು ತಾಲ್ಲೂಕು, ಜಿಲ್ಲಾ ಮಟ್ಟದಲ್ಲೂ ಜಯಶಾಲಿಗಳಾಗಲಿ" ಅಂತ ಶುಭ ಹಾರೈಸಿದರು. ಈ ಸಂದರ್ಭದಲ್ಲಿ ಶಾಲೆಯ ಮುಖ್ಯ ಗುರುಗಳಾದ ಶ್ರೀಮತಿ ಸಿದ್ದಮ್ಮ ಆರ್.ಪಾಟೀಲ, ಹನಮಂತ ಜಿ.ಬಡಿಗೇರ ಅಧ್ಯಕ್ಷರು ವಿಜಯಸೇನೆ, ಮುನೀರಬೇಗಂ ಅಧ್ಯಕ್ಷರು ಗ್ರಾಂ.ಪಂ., ಹೊನ್ನಪ್ಪ ಉಪ್ಪಾರ, ಶರಣಬಸವ ಕೆ. ಗುಡದಿನ್ನಿ, ಶೇರ್ ಷಾ ದೋಟಿಹಾಳ, ಜಗದೀಶ್ ತೊಗರಿ, ನಾಗೇಶ ಬಿರದಾರ, ಗ್ರಾಮ ಪಂಚಾಯತಿ ಸದಸ್ಯರಾದ ದುರುಗನಗೌಡ ರಾಂಪೂರ, ಹುಲಿಗೆಮ್ಮ ಅಮರಗುಂಡಮ್ಮ, ಬಸಮ್ಮ ಬಸವರಾಜ, ಮೌನೇಶ ರಾಂಪೂರ, ಈರನಗೌಡ ರಾಂಪೂರ, ಹನಮಪ್ಪ ಮೂಲಿಮನಿ, ಮಾನಪ್ಪ ತೋಟದ, ರಾಮಲಿಂಗಪ್ಪ ಅಗಸಿಮನಿ, ಸೋಮಪ್ಪ ಈಚನಾಳ, ಹುಲಗಪ್ಪ ನಾಗರಾಳ, ಕುಪ್ಪಣ್ಣ ತಳವಾರ,, ತಿರುಪತಿ ಜಾಲಿಬೆಂಚಿ ಸೇರಿದಂತೆ ಶಾಲಾ ಶಿಕ್ಷಕರು ವಿದ್ಯಾರ್ಥಿಗಳು ಇದ್ದರು.

# ಕರ್ನಾಟಕ ಲೋಕಾಯುಕ್ತ ರಾಯಚೂರು ವತಿಯಿಂದ ಸಾರ್ವಜನಿಕ ಕುಂದು ಕೊರತೆ ಮತ್ತು ಅಹವಾಲು ಸ್ವೀಕಾರ ಕಾರ್ಯಕ್ರಮ

❏ ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಪಟ್ಟಣದ ತಹಸೀಲ್ದಾರ್ ಕಚೇರಿ ಸಭಾಂಗಣದಲ್ಲಿ ಕರ್ನಾಟಕ ಲೋಕಾಯುಕ್ತ ರಾಯಚೂರು ವತಿಯಿಂದ ನಡೆದ ಸಾರ್ವಜನಿಕ ಕುಂದು ಕೊರತೆ ಮತ್ತು ಅಹವಾಲು ಸ್ವೀಕಾರ ಕಾರ್ಯಕ್ರಮದಲ್ಲಿ ಕರ್ನಾಟಕ ಲೋಕಾಯುಕ್ತ ರಾಯಚೂರು ಎಸ್.ಪಿ. ಸತೀಶ್ ಚಿಟಗುಪ್ಪಿ ಸಾರ್ವಜನಿಕರಿಂದ ಕುಂದು ಕೊರತೆ ಮತ್ತು ಅಹವಾಲುಗಳನ್ನು ಸ್ವೀಕಾರಿಸಿ ಮಾತನಾಡಿ ಕಾರ್ಯಕ್ರಮದಲ್ಲಿ 192 ಫಾರಂ ಅಡಿಯಲ್ಲಿ 3 ದೂರುಗಳು ಹಾಗೂ ಜಿಲ್ಲಾಧಿಕಾರಿಗಳಿಗೆ, ತಹಸೀಲ್ದಾರ್,**

ತಾಲೂಕು ಪಂಚಾಯಿತಿ ಇಲಾಖೆಗೆ ಸೇರಿದ 12 ಅಹವಾಲುಗಳನ್ನು ಸ್ವಿಕರಿಸಲಾಗಿದ್ದು ಅವುಗಳನ್ನು ಸಂಬಂಧಿಸಿದ ಇಲಾಖೆಗೆ ಕಳುಹಿಸಲಾಗುವುದು ಸಾರ್ವಜನಿಕರಿಗೆ ಹಾಗೂ ಫಲಾನುಭಾವಿಗಳಿಗೆ ಸರ್ಕಾರಿ ಕಚೇರಿಗಳಲ್ಲಿ ಸರ್ಕಾರದ ಸೇವೆಗಳನ್ನು ಹಾಗೂ ಸೌಲಭ್ಯಗಳನ್ನು ಪಡೆಯುವುದಕ್ಕೆ ಸರ್ಕಾರಿ ಅಧಿಕಾರಿಗಳಿಂದ ತೊಂದರೆಯಾದಲ್ಲಿ, ಅನಗತ್ಯವಾದ ವಿಳಂಬವಾದಲ್ಲಿ, ಅಥಾವ ಯಾವುದೆ ಬೇಡಿಕೆಗಳನ್ನು ಇಟ್ಟಲ್ಲಿ ಸಾರ್ವಜನಿಕರು ಕರ್ನಾಟಕ ಲೋಕಾಯುಕ್ತ ರಾಯಚೂರು ರವರಲ್ಲಿ ದೂರು ಹಾಗೂ ಅಹಾವಲುಗಳನ್ನು ಸಲ್ಲಿಸಿ ಪರಿಹಾರ ಪಡೆಯಬಹುದಾಗಿದೆ ಸಾರ್ವಜನಿಕರಿಗೆ ತಮ್ಮ ಕುಂದು ಕೊರತೆ ಮತ್ತು ಅಹವಾಲುಗಳನ್ನು ಸಲ್ಲಿಸುವುದಕ್ಕೆ ಅನುಕೂಲವಾಗುವಂತೆ ಜಿಲ್ಲೆಯ ವಿವಿಧ ತಾಲೂಕುಗಳಿಗೆ ಭೇಟಿ ನೀಡಿ ಸಾರ್ವಜನಿಕರಿಂದ ಕುಂದು ಕೊರತೆ ಮತ್ತು ಅಹವಾಲುಗಳನ್ನು ಸ್ವೀಕಾರ ಮಾಡಲಾಗುವುದು ಎಂದು ತಿಳಿಸಿದರು.

ಸಭೆಯಲ್ಲಿ ಕೆ.ಆರ್.ಎಸ್. ಪಕ್ಷದ ತಾ.ಅಧ್ಯಕ್ಷರಾದ ರಮೇಶನಾಯಕ ಲೋಕಯುಕ್ತರಲ್ಲಿ ಅಹವಾಲು ಸಲ್ಲಿಸಿ ತಾಲೂಕಿನಲ್ಲಿ ಶಾಲಾ ವಾಹನಗಳು ಹೆಚ್ಚು ಅಪಘಾತಕ್ಕೆ ಒಳಗಾಗುತ್ತಿರುವುದರಿಂದ ಮಕ್ಕಳ ಸುರಕ್ಷತೆಗಾಗಿ ಸಾರಿಗೆ ಇಲಾಖೆ ಅಧಿಕಾರಿಗಳು ಶಾಲಾ ವಹಾನಗಳ ಫಿಟ್ನೆಸ್ ಪರಿಶೀಲಿಸಬೇಕು, ಚಾಲಕರ ಚಾಲನ ಪ್ರಮಾಣ ಪತ್ರವನ್ನು ಪರಿಶೀಲಿಸಿ ಮಕ್ಕಳ ಸುರಕ್ಷತೆಗೆ ಅಗತ್ಯ ಕ್ರಮ ಕೈಗೊಳ್ಳಬೇಕು, ಪುರಸಭೆಯಿಂದ ಪಟ್ಟಣದ ವಿವಿಧ ವಾರ್ಡ್ಗಳಲ್ಲಿ ವಿತರಿಸಲಾಗುತ್ತಿರುವ ಕಸದ ಬುಟ್ಟಿ ಕಳಪೆ ಗುಣಮಟ್ಟದಿಂದ ಕೂಡಿದ್ದು ಗುತ್ತಿಗೆದಾರರ ಮೇಲೆ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ಮೇಜರ್ ಶಹಾನವಾಜ್ ಖಾನ್ ಹೈದ್ರಾಬಾದ್ ಕರ್ನಾಟಕ ಸಂಘದ ಅಧ್ಯಕ್ಷರಾದ ಎಸ್.ಎಂ.ಶಾನವಾಜ್ ಪಟ್ಟಣದ ಸರ್ಕಾರಿ ಖಾಬರಸ್ಥಾನ ವಕ್ಪಗೆ ಸೇರಿದ್ದು ಅತಿಕ್ರಮಣಕ್ಕೆ ಒಳಗಾಗಿದ್ದು ಹದುಬಸ್ತ ಮಾಡಿಕೊಡುವಂತೆ ಕೋರಿದರು.

ಕರ್ನಾಟಕ ದಲಿತ ಸಂಘಟನೆಗಳ ಒಕ್ಕೂಟದ



ಸಂಚಾಲಕರಾದ ಪ್ರಭುರಾಜ್ ಕೋಡ್ಲಿ ಮನವಿ ಸಲ್ಲಿಸಿ ಸಮಾಜ ಕಲ್ಯಾಣ ಇಲಾಖೆಗೆ ಸೇರಿದ ಪರಿಶಿಷ್ಟ ಜಾತಿ ಸಮುದಾಯದವರ ವಸತಿ ನಿಲಯಗಳಿಗೆ ಆಹಾರ ಸಾಮಾಗ್ರಿಗಳನ್ನುಪೂರೈಸುವುದಕ್ಕೆ ಟೆಂಡರ್ ಪಡೆದ ಗುತ್ತಿಗೆದಾರರು ಇದುವರೆಗೆ ಕೂಡ ವಸತಿ ನಿಲಯಗಳಿಗೆ ಅಗತ್ಯ ಆಹಾರ ಸಾಮಾಗ್ರಿಗಳನ್ನುಪೂರೈಕೆ ಮಾಡದೆ ಇರುವುದರಿಂದ ವಸತಿ ನಿಲಯದ ಮಕ್ಕಳಿಗೆ ಪೌಷ್ಟಕಾಂಶಯುತ ಗುಣಮಟ್ಟದ ಆಹಾರ ದೊರೆಯದೆ ಮಕ್ಕಳ ಆರೋಗ್ಯದ ಮೇಲೆ ಗಂಭಿರವಾದ ಆರೋಗ್ಯ ಸಮಸ್ಯೆಗಳಿಗೆ ಒಳಗಾಗುತ್ತಿದ್ದು ಕ್ರಮ ಕೈಗೊಳ್ಳಬೇಕು. ಕಲ್ಮಾಲದಿಂದ ಸಿಂಧನೂರು ವರೆಗಿನ ಚತುಷ್ಪತ್ ರಸ್ತೆ ಯನ್ನು ನಿರ್ಮಾಣ ಮಾಡುತ್ತಿರುವ ಗುತ್ತಿಗೆ ಸಂಸ್ಥೆಯವರು ಹಾಗೂ ಕರ್ನಾಟಕ ರಾಜ್ಯ ಹೆದ್ದಾರಿ ಇಲಾಖೆ ಅಧಿಕಾರಿಗಳು ರಸ್ತೆ ನಡುವಿನಿಂದ 50 ಅಡಿ ನಿರ್ಮಾಣ ಮಾಡಬೇಕಾಗಿರುವ ರಸ್ತೆಯನ್ನು 30 ಅಡಿಗಳಿಗೆ ಕುಗ್ಗಿಸಿದ್ದು ಮುಂದಿನ ದಿನಗಳಲ್ಲಿ ಸಾರ್ವಜನಿಕರ ಸಂಚಾರಕ್ಕೆ ತೊಂದರೆಯಾಗಲಿರುವುದರಿಂದ ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು.

ಚೀಕಲಪರ್ವಿ ಗ್ರಾಮದ ಹತ್ತಿರ ನಿರ್ಮಾಣ ವಾಗುತ್ತಿರುವ ವಿದ್ಯುತ್ ಉಪ ಕೇಂದ್ರಕ್ಕೆ ಅಗತ್ಯವಿರು ನೂರಾರು ಎಕರೆ ಭೂಮಿಯನ್ನು ಮಾರುಕಟ್ಟೆ ಬೆಲೆಗಿಂತ ಹೆಚ್ಚಿನ ಮೋತ್ತಕ್ಕೆ ಖರೀದಿಸಿ ಸರ್ಕಾರದ ಬೊಕಸಕ್ಕೆ ನಷ್ಟ ಉಂಟುಮಾಡಿದ್ದು ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು.

ದಲಿತ ಸೇನೆಯ ರಾಜ್ಯ ಸಂಘಟನಾ ಕಾರ್ಯದರ್ಶಿ ಜಾವಿದ್ ಖಾನ್ ಮನವಿ ಸಲ್ಲಿಸಿ ಮಾನ್ವಿ ಪಟ್ಟಣದ ಅಂಬೇಡ್ಕರ್ ನಗರ ನವನಗರ,ಸೋನಿಯಾಗಾಂಧಿ ನಗರ, ಲಘುವಾಹನ ಚಾಲಕರ ಸಂಘದ ಪತ್ರಕರ್ತರ ಸಂಘ ಹಮಾಲರ ಸಂಘಗಳ ಪಲಾನುಭವಿಗಳಿಗೆ ಹಕ್ಕು ಪತ್ರಗಳನ್ನು ನೀಡಬೇಕು ಹಾಗೂ ಮೂಲಸೌಲಭ್ಯ ಕಲ್ಪಿಸಬೇಕು ಎಂದು ಒತ್ತಾಯಿಸಿದರು. ಮಹಿಳೆಯೊಬ್ಬರು ವಲಸೆದಾರರಿಗೆ ತಮ್ಮ ಹತ್ತಿರದ ನ್ಯಾಯಬೇಲೆ ಅಂಗಡಿಯಲ್ಲಿ ಪಡಿತರ ಚೀಟಿಗೆ ಅಗತ್ಯ ಪಡಿತರ ನೀಡುತ್ತಿಲ್ಲ ಕ್ರಮ ಕೈಗೊಳ್ಳುವಂತೆ ಮನವಿ ಮಾಡಿಕೊಂಡರು.

ಕರ್ನಾಟಕ ಲೋಕಾಯುಕ್ತ ರಾಯಚೂರು ಹಾಗೂ ತಾಲೂಕು ಆಡಳಿತದಿಂದ ಸಾರ್ವಜನಿಕ ಕುಂದು ಕೊರತೆ ಮತ್ತು ಅಹವಾಲು ಸ್ವೀಕಾರ ಕಾರ್ಯಕ್ರಮದ ಬಗ್ಗೆ ಸರಿಯಾದ ಪ್ರಚಾರ ಹಾಗೂ ಮಾಹಿತಿ ನೀಡದೆ ಇರುವುದರಿಂದ ಸಾರ್ವಜನಿಕರಿಂದ ಹೆಚ್ಚಿನ ಅಹವಾಲುಗಳು ಸಲ್ಲಿಕೆಯಾಗಿಲ್ಲ ಅದ್ದರಿಂದ ಮುಂದಿನ ದಿನಗಳಲ್ಲಿ ಸ್ಥಳಿಯ ಮಾಧ್ಯಮದವರಿಗೆ ಹಾಗೂ ಬ್ಯಾನರ್ ಅಳವಡಿಸಿ ಜನರಿಗೆ ಮಾಹಿತಿ ನೀಡಿದಲ್ಲಿ ಹೆಚ್ಚಿನ ಜನರು ಕಾರ್ಯಕ್ರಮದಲ್ಲಿ ತಮ್ಮ ಸಮಸ್ಯೆಗಳ ಬಗ್ಗೆ ಹೇಳಿಕೊಂಡು ಪರಿಹಾರ ಪಡೆಯುವುದಕ್ಕೆ ಸಾಧ್ಯವಾಗಲಿದೆ . ಕಾರ್ಯಕ್ರಮದಲ್ಲಿ ತಹಸೀಲ್ದಾರ್ ಭೀಮರಾಯ ಬಿ.ರಾಮಸಮುದ್ರ, ಕರ್ನಾಟಕ ಲೋಕಾಯುಕ್ತ ರಾಯಚೂರು ಪಿ.ಐ. ಕಾಳಪ್ಪ ಬಡಿಗೇರ್,ಪಿ.ಐ. ರವಿಪುರುಷೋತ್ತಮ ಹಾಗೂ ಮಾನ್ವಿ ಪೋಲಿಸ್ ಠಾಣೆಯ ಪಿ.ಐ. ಸೋಮಸೇಖರ ಎಸ್.ಕೆಂಚರೆಡ್ಡಿ, ಪುರಸಭೆ ಮುಖ್ಯಾಧಿಕಾರಿ ಪರಶುರಾಮ್ ದೇವಮಾನೆ, ತಾ.ಅರೋಗ್ಯಧಿಕಾರಿ ಡಾ.ಶರಣಸವರಾಜು, ಪ,ವರ್ಗಗಳ ಕಲ್ಯಾಣಧಿಕಾರಿ ಮಹಾಲಿಂಗಪ್ಪ ಇಂಗಳಾದಳ್,ಸೇರಿದಂತೆ ತಾಲೂಕಿನ ವಿವಿಧ ಇಲಾಖೆಗಳ ತಾಲೂಕು ಮಟ್ಟದ ಅಧಿಕಾರಿಗಳು ಭಾಗವಹಿಸಿದರು.

## ನೇಮಕಾತಿ ಪ್ರಕಟಣೆ

RITES ನೇಮಕಾತಿ 2025 40 ಮ್ಯಾನೇಜರ್ ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ RITES ನೇಮಕಾತಿ 2025: 40 ಮ್ಯಾನೇಜರ್ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ರೈಲ್ ಇಂಡಿಯಾ ತಾಂತ್ರಿಕ ಮತ್ತು ಆರ್ಥಿಕ ಸೇವೆಗಳು ನವೆಂಬರ್ 2025 ರ ಅಧಿಕೃತ ಅಧಿಸೂಚನೆಯ ಮೂಲಕ ಮ್ಯಾನೇಜರ್ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅಖಿಲ ಭಾರತ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 30-ನವೆಂಬರ್-2025 ರಂದು ಅಥವಾ ಮೊದಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. https://recruit.rites.com/frmRegistration.aspx ?Official Website: rites.com

## ದೊಡ್ಡ ಹಂತದಲ್ಲಿ ಬಸ್ ಅಪಘಾತ ದೆಹಲಿ-ವಾರಾಣಸಿ ಸ್ಲೀಪರ್ ಬಸ್

❏ ನೈಜ್ಯ ದೆಸೆ ನ್ಯೂಸ್

ನವದೆಹಲಿ, ನವೆಂಬರ್ 28: ಮೂವತ್ತರಿಂದ ನಲವತ್ತು ಪ್ರಯಾಣಿಕರನ್ನು ಹೊತ್ತು ಹೊರಟಿದ್ದ ದೆಹಲಿ-ವಾರಾಣಸಿ ಸ್ಲೀಪರ್ ಬಸ್ (Bus) ಬೆಂಕಿಗಾಹುತಿಯಾಗಿರುವ ಘಟನೆ ವರದಿಯಾಗಿದೆ. ಕಾನ್ಪುರದ ಎನ್‌ಎಚ್19ರ ರಾಮದೇವಿ ಅಡ್ಡರಸ್ತೆಯಲ್ಲಿ ಪ್ರಯಾಣಿಕರು ತಮ್ಮ ಜೀವಗಳನ್ನು ಉಳಿಸಿಕೊಳ್ಳಲು ಅಡ್ಡಾದಿಡ್ಡಿಯಾಗಿ ಓಡಿದ್ದಾರೆ. ಕೂಡಲೇ ಬೆಂಕಿ ಇಡೀ ಬಸ್ಸನ್ನು ಆವರಿಸಿತ್ತು. ಕೆಲವು ಪ್ರಯಾಣಿಕರು ಗಾಯಗೊಂಡಿದ್ದರೂ, ಎಲ್ಲಾ ಜೀವಗಳನ್ನು ಉಳಿಸಲಾಗಿದೆ ಎನ್ನುವ ಮಾಹಿತಿ ತಿಳಿದುಬಂದಿದೆ.



ಬಸ್ ವಾರಾಣಸಿಗೆ ಹೋಗುತ್ತಿತ್ತು, ಮೇಲಿನ ಡೆಕ್ನಲ್ಲಿ ಇರಿಸಿಲಾಗಿದ್ದ ಸಾಮಾನುಗಳಿಂದ ಹಠಾತ್ ಹೊಗೆ ಬೆಂಕಿಗೆ ಕಾರಣವಾಗಿತ್ತು. ಬಸ್ ಚಾಲಕ ಮತ್ತು ನಿರ್ವಾಹಕ ಕೂಡಲೇ ಎಚ್ಚರಿಕೆ ನೀಡಿದ್ದರು. ಬಸ್ಸನ್ನು ಪಕ್ಕಕ್ಕೆ ನಿಲ್ಲಿಸಲು ಪ್ರಯತ್ನಿಸಿದರು ಅಷ್ಟರಲ್ಲಾಗಲೇ ಬೆಂಕಿ ಹೊತ್ತಿಕೊಳ್ಳಲು ಶುರುವಾಗಿತ್ತು. ಬಸ್ಸಿನ ಮೇಲ್ಛಾವಣಿಯ ಮೇಲೆ ತುಂಬಿದ್ದ ಭಾರವಾದ ಲಗೇಜಿನಲ್ಲಿ ಮೊದಲು ಬೆಂಕಿ ಕಾಣಿಸಿಕೊಂಡಿತ್ತು. ಇದರಿಂದಾಗಿ ಪ್ರಯಾಣಿಕರು ಕೂಡಲೇ ಹೊರ ನಡೆದರು. ಕೆಲವರು ಕಿಟಕಿಗಳಿಂದ ಕೆಳಗೆ ಹಾರಿದ್ದಾರೆ. ಕೆಲವರು ಸಿಕ್ಕಿಹಾಕಿಕೊಂಡಿದ್ದರು. ಬೆಂಕಿಯನ್ನು ಕಡಿಮೆ ಮಾಡಲು ನೀರಿನ ಬಾಟಲಿಗಳನ್ನು ಎಸೆದಿದ್ದರು.ಬಸ್ಸಿನಲ್ಲಿ ಅನುಮತಿಸಲಾದ ಪ್ರಮಾಣಕ್ಕಿಂತ ಹೆಚ್ಚಿನ ಸಾಮಾನುಗಳನ್ನು ತುಂಬಿಸಲಾಗಿತ್ತು ಎಂದು ಪ್ರಯಾಣಿಕರೊಬ್ಬರು ಹೇಳಿದ್ದಾರೆ. ಪ್ಲಾಸ್ಟಿಕ್ ಚೀಲಗಳು, ಕಬ್ಬಿಣದ ಪೆಟ್ಟಿಗೆಗಳು ಮತ್ತು ಟ್ರಂಕ್ಗಳು ಸೇರಿದಂತೆ ಹಲವು ವಸ್ತುಗಳಿದ್ದವು. ಮತ್ತೊಬ್ಬ ಪ್ರಯಾಣಿಕ ತನ್ನ ಬ್ಯಾಗ್‌ನಲ್ಲಿ 20,000 ರೂ. ನಗದು, ಬಟ್ಟೆಗಳು ಮತ್ತು ಪ್ರಮುಖ ದಾಖಲೆಗಳು ಸುಟ್ಟುಹೋಗಿವೆ ಎಂದು ಹೇಳಿದರು. ಮದುವೆಗೆ ಮಿರ್ಜಾಪುರಕ್ಕೆ ಪ್ರಯಾಣಿಸುತ್ತಿದ್ದ ಮಹಿಳೆಯೊಬ್ಬರು ತಮ್ಮ ಲಡ್ಡು ಗೋಪಾಲ್ ವಿಗ್ರಹ, ಲ್ಯಾಪ್‌ಟಾಪ್, ಬಟ್ಟೆಗಳು ಮತ್ತು 40,000 ರೂ. ಮೌಲ್ಯದ ಆಭರಣಗಳಿಟ್ಟುಕೊಂಡಿದ್ದರು ಅವು ಕೂಡ ಸುಟ್ಟುಹೋಗಿವೆ ಎಂದು ಹೇಳುತ್ತಾ ಕಣ್ಣೀರು ಹಾಕಿದ್ದಾರೆ. ಮಾಹಿತಿ ಪಡೆದ ನಂತರ ಅಗ್ನಿಶಾಮಕ ಇಲಾಖೆ ತ್ವರಿತವಾಗಿ ಕಾರ್ಯನಿರ್ವಹಿಸಿತ್ತು ಮತ್ತು ಸಿಎಫ್‌ಒ ದೀಪಕ್ ಶರ್ಮಾ ರಕ್ಷಣಾ ಕಾರ್ಯಾಚರಣೆಗಾಗಿ ತಕ್ಷಣವೇ ಆರು ಅಗ್ನಿಶಾಮಕ ವಾಹನಗಳನ್ನು ಸ್ಥಳಕ್ಕೆ ಕಳುಹಿಸಿದರು. ರಾಷ್ಟ್ರೀಯ ಹೆದ್ದಾರಿಯಲ್ಲಿ ಸಂಚಾರ ದಟ್ಟಣೆ ಉಂಟಾಗಿದ್ದರಿಂದ, ಬೆಂಕಿಯನ್ನು ನಿಯಂತ್ರಣಕ್ಕೆ ತರಲು ಸುಮಾರು ಒಂದು ಗಂಟೆ ಶ್ರಮಿಸಬೇಕಾಯಿತು. ಇತ್ತೀಚೆಗಷ್ಟೇ ಹೈದರಾಬಾದ್‌ನಿಂದ ಬೆಂಗಳೂರಿಗೆ 41 ಪ್ರಯಾಣಿಕರೊಂದಿಗೆ ತೆರಳುತ್ತಿದ್ದ ಐಷಾರಾಮಿ ಬಸ್ ಬೆಂಕಿಗಾಹುತಿಯಾಗಿ 20 ಮಂದಿ ಸಜೀವ ದಹನಗೊಂಡು, ಹಲವರು ಗಾಯಗೊಂಡಿದ್ದರು. ಬೆಂಕಿ ತಗುಲಲು ಒಂದು ದ್ವಿಚಕ್ರ ವಾಹನ ಬಸ್‌ಗೆ ಡಿಕ್ಕಿ ಹೊಡೆದಿದ್ದು ಕಾರಣ ಎನ್ನಲಾಗಿದೆ. ನಂತರ ಜೈಸಲ್ಮೇರ್‌ನಿಂದ ಜೋಧ್‌ಪುರಕ್ಕೆ ತೆರಳುತ್ತಿದ್ದ ಬಸ್ ಅಪಘಾತದ ನಂತರ ಬೆಂಕಿಗೆ ಆಹುತಿಯಾಯಿತು. ಈ ಘಟನೆಯಲ್ಲಿ 57 ಜನರಲ್ಲಿ ಕನಿಷ್ಠ 20 ಮಂದಿ ಸಾವನ್ನಪ್ಪಿದ್ದರು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

## SN ಕ್ಯಾಂಪ್ ನಲ್ಲಿ "ರಾಷ್ಟ್ರೀಯ ತಂಬಾಕು ನಿಯಂತ್ರಣ ಕಾರ್ಯಕ್ರಮ

❏ ನೈಜ್ಯ ದೆಸೆ ನ್ಯೂಸ್

ಜಿಲ್ಲಾಡಳಿತ ಜಿಲ್ಲಾ ಪಂಚಾಯತ್ ರಾಯಚೂರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಾಯಚೂರ್ ಜಿಲ್ಲಾ ತಂಬಾಕು ನಿಯಂತ್ರಣ ಕಾರ್ಯಕ್ರಮ ರಾಯಚೂರು ತಾಲೂಕ ಆರೋಗ್ಯ ಅಧಿಕಾರಿಗಳು ಕಾರ್ಯಾಲಯ ಸಿಂಧನೂರ್ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರ ಹಾರಾಪುರ ಇವರ ಇವರ ಸಂಯುಕ್ತ ಆಶ್ರಯದಲ್ಲಿ ಬಸ್ಸಾಪುರ ಇಎ ಗ್ರಾಮದ ವ್ಯಾಪ್ತಿಗೆ ಬರುವ ಖಓ ಕ್ಯಾಂಪ್ ನಲ್ಲಿ " ರಾಷ್ಟ್ರೀಯ ತಂಬಾಕು ನಿಯಂತ್ರಣ ಕಾರ್ಯಕ್ರಮ" ಅಂಗವಾಗಿ ತಂಬಾಕು ಮುಕ್ತ ಯುವ ಅಭಿಯಾನ 3.0 ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.

ತಂಬಾಕು ಮುಕ್ತ ಸಮಾಜ ನಿರ್ಮಾಣಕ್ಕೆ ಪರಸ್ಪರ ಕೈಜೋಡಿಸೋಣ. ತಂಬಾಕಿನ ದುಷ್ಪರಿಣಾಮಗಳು ಹಲವಾರು ಮತ್ತು



ಮರಣಾಂತಿಕವಾಗಿದ್ದು ಪ್ರಮುಖವಾಗಿ ಕ್ಯಾನ್ಸರ್ ಹೃದಯ ಸಂಬಂಧಿ ಕಾಯಿಲೆಗಳು ಶ್ವಾಸಕೋಶದ ಸಮಸ್ಯೆಗಳು ಮತ್ತು ಬಾಯಿಯ ಆರೋಗ್ಯದ ಮೇಲೆ ತುಂಬಾ ಪರಿಣಾಮ ಬೀರುತ್ತವೆ ಇದು ವ್ಯಸನಕಾರಿ ನಿಕೋಟಿನಿಂದಾಗಿ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರಬಹುದು ತಂಬಾಕು ಸೇವನೆಯು ಆಯುಷ್ ಅನ್ನು ಕಡಿಮೆ ಮಾಡುತ್ತದೆ ಮತ್ತು ನಿಷ್ಕ್ರಿಯ ಧೂಮಪಾನದಿಂದ ಇತರರಿಗೂ ಆನೆಯಾಗುತ್ತದೆ ಆರೋಗ್ಯದ ಮೇಲಿನ ದುಷ್ಪರಿಣಾಮಗಳು ಹೆಚ್ಚಾಗುತ್ತದೆ ಸಂತಾನೋತ್ಪತ್ತಿ ಸಮಸ್ಯೆಗಳು ಉಂಟಾಗುತ್ತದೆ.

ತಂಬಾಕು ನಿಷೇಧ ಮತ್ತು ತಡೆಗಟ್ಟುವಿಕೆ ತಂಬಾಕು ನಿಲಗಡೆ ಕೇಂದ್ರಗಳು ಕಾನೂನು ಕ್ರಮಗಳು ಜಾಗೃತಿ ಮೂಡಿಸುವುದು ಶಾಲಾ-ಕಾಲೇಜುಗಳ ಸುತ್ತಮುತ್ತಲ ಪ್ರದೇಶಗಳಲ್ಲಿ ತಂಬಾಕು ಮಾರಾಟ ಮಾಡಿದಲ್ಲಿ ಶಿಕ್ಷೆ, ತಂಬಾಕು ಸೇವನೆಯ ದುಷ್ಪರಿಣಾಮಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವುದು ಬಹಳ ಮುಖ್ಯವಾಗಿದೆ ತಂಬಾಕು ಸೇವಿಸಿದಾಗ ನಿಕೋಟಿನ್ ದೈಹಿಕ ಮತ್ತು ಮಾನಸಿಕ ಅವಲಂಬನೆಯನ್ನು ಉಂಟುಮಾಡುತ್ತದೆ ತಂಬಾಕು ಸೇವನೆ ಧೂಮಪಾನದ ದುಷ್ಪರಿಣಾಮಗಳ ಕುರಿತು

ಉಚಿತ ಆಪ್ತ ಸಮಾಲೋಚನೆ ಆಧುನಿಕ ಯಂತ್ರಗಳ ಸಹಾಯದಿಂದ ತಂಬಾಕು ಸೇವನೆಯ ಪ್ರಮಾಣವನ್ನು ಪತ್ತೆಹಚ್ಚಲಾಗುವುದು ಹಾಗೂ ಅಗತ್ಯವಿರುವವರಿಗೆ (nicotin replacement therapy NRT) ಚಿಕಿತ್ಸೆ ಕೊಡಲಾಗುವುದು, " ಜೀವನ ಆಯ್ದುಕೊಳ್ಳಿ ತಂಬಾಕನಲ್ಲ " ಸದರಿ ಕಾರ್ಯಕ್ರಮದಲ್ಲಿ ಶ್ರೀಮತಿ ರೇಷ್ಮಾ ಕಊಅಔ, ಶ್ರೀಮತಿ ಭಾರತಿ ಆಶಾ ಕಾರ್ಯಕರ್ತೆಯರು, ಗರ್ಭಿಣಿಯರು, ಸಾರ್ವಜನಿಕರು ಉಪಸ್ಥಿತರಿದ್ದರು.

## ಸಿಂಧನೂರು ಕಾರ್ತೀಕ ಮಾಸದ ಪ್ರಯುಕ್ತ ದಿಪೋತ್ಸವ ಕಾರ್ಯಕ್ರಮ



❏ ನೈಜ್ಯ ದೆಸೆ ನ್ಯೂಸ್

ಸಿಂಧನೂರು: ನಗರದ ಬಡೀಬೇಸ್ ಕಾಲೋನಿಯ ಶ್ರೀ ಕಾಳಿಕಾದೇವಿ ಹಾಗೂ ದ್ಯಾವಮ್ಮ ದೇವಿ ದೇವಸ್ಥಾನದಲ್ಲಿ ಮಂಗಳವಾರ ಕಾರ್ತೀಕ ಮಾಸದ ಪ್ರಯುಕ್ತ ದಿಪೋತ್ಸವ ಕಾರ್ಯಕ್ರಮ ಅದ್ದೂರಿಯಾಗಿ ನೆರವೇರಿತು.


ಮಂಗಳವಾರ ಬೆಳಗ್ಗೆ ಶ್ರೀ ಕಾಳಿಕಾದೇವಿ ಹಾಗೂ ದ್ಯಾವಮ್ಮ ದೇವಿಗೆ ವಿಶೇಷ ಪೂಜೆ ಸಲ್ಲಿಸಿ ಪುಷ್ಪಲಂಕಾರ ಮಾಡಲಾಯಿತು. ಬೆಳಗ್ಗೆಯಿಂದ ನಗರ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಭಕ್ತರು ಹಣ್ಣು,ಹೂ,ಕಾಯಿ,ಕರ್ಪೂರದೊಂದಿಗೆ ದೇವಸ್ಥಾನಕ್ಕೆ ಆಗಮಿಸಿ ತಮ್ಮ ಇಷ್ಟಾರ್ಥಗಳು ಸಿದ್ದಿಗೊಳ್ಳಲು ದೇವರಿಗೆ ಮೊರೆ ಹೋದರು.ಸಂಜೆ ಮಹಿಳೆಯರು, ಯುವಕರು, ಹಿರಿಯರು ಎಲ್ಲರೂ ಸೇರಿ ದೀಪದ ಹಣತೆಯಲ್ಲಿ ಎಣ್ಣೆ ಬತ್ತಿ ಹಾಕಿ ಹರ್ಷಭರಿತರಾಗಿ ದೀಪ ಹಚ್ಚಿ ಪ್ರಾಥನೆ ಸಲ್ಲಿಸಿದರು.ಇದೇವೇಳೆ ದೇವಸ್ಥಾನ ದೀಪಗಳ ಅಲಂಕಾರದಿಂದ ಕಂಗೊಲುಸುತ್ತಿತ್ತು.ನೋಡುಗರ ಕಣ್ಮನ ಸೆಳೆಯಿತು.

ಈ ಸಂಧರ್ಭದಲ್ಲಿ ವಿಶ್ವಕರ್ಮ ಸಮಾಜದ ತಾಲೂಕ ಅಧ್ಯಕ್ಷ ಮೌನೇಶ ತಿಡಿಗೋಳ,ಶ್ರೀ ಕಾಳಿಕಾದೇವಿ ದೇವಸ್ಥಾನ ಟ್ರಸ್ಟ್ ಅಧ್ಯಕ್ಷ ಮಂಜುನಾಥ ಕೊಟ್ನಕಲ್,ಕಾರ್ಯದರ್ಶಿ ಬಸವರಾಜ ಕಮತಗಿ,ತಾಲೂಕ ಕರ್ಪೆಂಟರ್ ಸಂಘದ ತಾಲೂಕ ಅಧ್ಯಕ್ಷ ರವೀಂದ್ರ ಗದ್ರಟಗಿ, ವನಸಿರಿ ಪೌಂಡೇಷನ್ ಮಸ್ಕಿ ತಾಲೂಕ ಅಧ್ಯಕ್ಷ ರಾಜು ಪತ್ತಾರ ಬಳಗಾನೂರ, ವಿಶ್ವಕರ್ಮ ಸಮಾಜದ ಸದಸ್ಯರಾದ ಪಂಪಣ್ಣ ಕಲಮಂಗಿ,ಷಣ್ಮುಖಪ್ಪ ಮುಳ್ಳೂರು,ಅರ್ಚಕರಾದ ನರಸಪ್ಪ ಪೂಜಾರಿ,ಮರಿಸ್ವಾಮಿ ಬಡಿಗೇರ,ಅಶೋಕ ಬಡಿಗೇರ, ಮನೋಹರ ಪೊಲೀಸ್,ಮುನೇಶ, ಭಾಗ್ಯಪ್ಪ ಪತ್ತಾರ,ಮಂಜುನಾಥ ಉಪ್ಪಲದೊಡ್ಡಿ,ಪ್ರಶಾಂತ ಕವಿತಾಳ, ಶಶಿಕಾಂತ ಮುದಗಲ್,ರವಿರಾಜ, ವಿನಯಕ ಕುರಕುಂದ ಹಾಗೂ ವಿಶ್ವಕರ್ಮ ಸಮಾಜದ ಮುಖಂಡರುಗಳು ಮಹಿಳೆಯರು,ನಗರ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಸಕಲ ಸದ್ಭಕ್ತರು ಭಾಗವಹಿಸಿದ್ದರು.

## ಸಿಲಿಂಡರ್ ಸ್ಫೋಟ: ಮನೆ ಸಂಪೂರ್ಣ ಜಖಂ

❏ ನೈಜ್ಯ ದೆಸೆ ನ್ಯೂಸ್

ತಾಳಿಕೋಟೆ: ಪಟ್ಟಣದ ಗಣೇಶ ನಗರದಲ್ಲಿರುವ ಹೆಸ್ಕಾಂ ಉದ್ಯೋಗಿ ರವಿ ಕೋಳೂರ ಇವರ ಮನೆಯಲ್ಲಿ ಗ್ಯಾಸ್ ಸೋರಿಕೆಯಿಂದಾಗಿ ಸಿಲಿಂಡರ್ ಸ್ಫೋಟಗೊಂಡಿದ್ದು ಇಡೀ ಮನೆ ಜಖಂಗೊಂಡ ಘಟನೆ ಗುರುವಾರ ನಡೆದಿದೆ. ಪಟ್ಟಣದ ಗಣೇಶನಗರದಲ್ಲಿರುವ ಹೆಸ್ಕಾಂ ಉದ್ಯೋಗಿ ರವಿ ಕೋಳೂರ ಇವರ ಮನೆಯಲ್ಲಿ ಮಧ್ಯಾಹ್ನ 1-25 ಘಂಟೆ ಸಮೀಪದಲ್ಲಿ ಗ್ಯಾಸ್ ಸಿಲಿಂಡರ್ ಸ್ಫೋಟಗೊಂಡಿದ್ದು ಸ್ಫೋಟದ ಶಬ್ದ ಕೇಳಿ ಬಡಾವಣೆ ನಿವಾಸಿಗಳು ಅಗ್ನಿಶಾಮಕ ದಳ ಹಾಗೂ ಸ್ಥಳೀಯ ಪೊಲೀಸ್ ಠಾಣೆಗೆ ವಿಷಯ ತಿಳಿಸಿದ್ದಾರೆ.



ತಕ್ಷಣದಲ್ಲಿ ಘಟನಾ ಸ್ಥಳಕ್ಕೆ ಧಾವಿಸಿದ ಅಗ್ನಿಶಾಮಕ ದಳದ ಸಿಬ್ಬಂದಿಗಳು ಬೀಗ ಹಾಕಿದ ಮನೆಯನ್ನು ತೆರೆದು ಒಳಗೆ ಪ್ರವೇಶಿಸಿ ಹಾನಿ ತಪ್ಪಿಸುವ ಕಾರ್ಯ ಮಾಡಿದ್ದಾರೆ. ಘಟನೆ ಸಂಭವಿಸಿದ ಸಮಯದಲ್ಲಿ ಮನೆಯ ಮಾಲೀಕ ರವಿ ಕೋಳೂರ,ಅವರ ಧರ್ಮಪತ್ನಿ ಹಾಗೂ ಮಕ್ಕಳು ಮನೆಯಲ್ಲಿ ಇಲ್ಲದೇ ಇರುವುದರಿಂದ ಯಾವುದೇ ರೀತಿಯ ಪ್ರಾಣ ಹಾನಿ ಸಂಭವಿಸಿಲ್ಲ. ಸ್ಫೋಟದ ತೀವ್ರತೆಯಿಂದಾಗಿ ಇಡೀ ಮನೆಯ ಗೋಡೆಗಳು ಬಿರುಕುಕೊಂಡಿವೆ ಮತ್ತು ಕೆಲವು ಗೋಡೆಗಳು ಅರ್ಧ ಭಾಗ ಬಿದ್ದಿರುತ್ತವೆ.

ಸ್ಫೋಟದಿಂದಾಗಿ ಮನೆಯಲ್ಲಿದ್ದ 3.80 ಲಕ್ಷ ನಗದು ಹಣ ಮತ್ತು ಪ್ರಮುಖ ದಾಖಲೆ ಪತ್ರಗಳು ಸುಟ್ಟು ಕರಕಲಾಗಿದ್ದು ಒಟ್ಟು ಐದು ಲಕ್ಷದಷ್ಟು ನಷ್ಟವಾಗಿದೆ ಎಂದು ಮನೆಯ ಮಾಲೀಕ ರವಿ ಕೋಳೂರ ತಿಳಿಸಿದ್ದಾರೆ. ಘಟನಾ ಸ್ಥಳಕ್ಕೆ ಅಧಿಕಾರಿಗಳ ಭೇಟಿ: ಸುದ್ದಿ ತಿಳಿಯುತ್ತಿದ್ದಂತೆಯೇ ತಹಶೀಲ್ದಾರ್ ಡಾ.ವಿನಯಾ ಹೂಗಾರ ಅವರು ಸ್ಥಳಕ್ಕೆ ಭೇಟಿ ನೀಡಿ ಘಟನೆಯ ವಿವರ ಪಡೆದುಕೊಂಡು ಅಗತ್ಯ ಕ್ರಮಕ್ಕೆ ಮುಂದಾಗಿದ್ದಾರೆ. ಸ್ಥಳೀಯ ಠಾಣಾ ಪಿಎಸ್‌ಐ ಜ್ಯೋತಿ ಖೋತ್ ಅವರು ಸಿಬ್ಬಂದಿಯೊಂದಿಗೆ ಹೆಚ್ಚಿನ ಮಾಹಿತಿ ಕಲೆ ಹಾಕುತ್ತಿದ್ದಾರೆ.

## ಗದಗ ರೈಲ್ವೆ ನಿಲ್ದಾಣಕ್ಕೆ ಪುಟ್ಟರಾಜ ಗವಾಯಿ ನಾಮಕರಣ ಅಗತ್ಯ :ಶಿವಕುಮಾರ್ ಚಲ್ಮಲ್




❏ ನೈಜ್ಯ ದೆಸೆ ನ್ಯೂಸ್

ಮಾನ್ವಿ: ಗದಗ ರೈಲ್ವೆ ನಿಲ್ದಾಣಕ್ಕೆ "ಶ್ರೀ ಗಾನಯೋಗಿ ಪಂಡಿತ್ ಪುಟ್ಟರಾಜ ಗವಾಯಿ" ಅವರ ಪವಿತ್ರ ಹೆಸರು ನಾಮಕರಣ ಮಾಡುವಂತೆ ವಿನಂತಿಸುವ ಮನವಿಯನ್ನು ಸಂಕಲ್ಪ ವಿಕಲಚೇತನರ ಒಕ್ಕೂಟದ ವತಿಯಿಂದ ಇಂದು ಮಾನ್ವಿ ತಹಸೀಲ್ದಾರರ ಮೂಲಕ ರಾಯಚೂರು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಸಂಕಲ್ಪ ವಿಕಲಚೇತನರ ಒಕ್ಕೂಟದ ಜಿಲ್ಲಾಧ್ಯಕ್ಷ ಶಿವಕುಮಾರ್ ಚಲ್ಮಲ್ ಅವರು ಹೀಗಂದರು: "ಪುಟ್ಟರಾಜ ಗವಾಯಿಗಳವರು ದಿವ್ಯಾಂಗ ಸಮುದಾಯಕ್ಕೆ ಮಾತ್ರವಲ್ಲ, ಸಂಪೂರ್ಣ ಸಮಾಜಕ್ಕೆ ದಾರಿ ತೋರಿಸಿದ ಮಹನೀಯರು. ಅವರ ಜೀವನವೇ ಸೇವೆ, ತ್ಯಾಗ ಮತ್ತು ಮಾನವೀಯತೆಯ ನಿದರ್ಶನ. ಅಂತಹ ಮಹನೀಯರ ನಾಮವನ್ನು ಗದಗ ರೈಲ್ವೆ ನಿಲ್ದಾಣಕ್ಕೆ ನಾಮಕರಣ ಮಾಡಿದರೆ ಅದು ಕರ್ನಾಟಕದ ಹೆಮ್ಮೆ, ದಿವ್ಯಾಂಗರ ಗೌರವ" ಎಂದು ಹೇಳಿದರು.

ಮುಂದುವರಿಸಿ, "ಸಮಾಜದಲ್ಲಿ ದಿವ್ಯಾಂಗರಿಗಾಗಿ ಗವಾಯಿಗಳವರು ಮಾಡಿದ ಸೇವೆ ಅಮೂಲ್ಯ. ಅವರ ಹೆಸರು ನಿಲ್ದಾಣಕ್ಕೆ ಸಿಗುವುದರಿಂದ ಮುಂದಿನ ಪೀಳಿಗೆಗಳಿಗೆ ಇದು ಪ್ರೇರಣೆಯಾಗಲಿದೆ. ಸರ್ಕಾರ ಮತ್ತು ರೈಲ್ವೆ ಇಲಾಖೆ ಈ ಮನವಿಯನ್ನು ಗಂಭೀರವಾಗಿ ಪರಿಗಣಿಸಬೇಕು" ಎಂದು ಅವರು ಮನವಿ ಮಾಡಿದರು. ಸಲ್ಲಿಸಲಾದ ಮನವಿಯಲ್ಲಿ, ಗದಗ ರೈಲ್ವೆ ನಿಲ್ದಾಣವನ್ನು "ಶ್ರೀ ಗಾನಯೋಗಿ ಪಂಡಿತ್ ಪುಟ್ಟರಾಜ ಗವಾಯಿ ರೈಲ್ವೆ ನಿಲ್ದಾಣ" ಎಂದು ನಾಮಕರಣ ಮಾಡುವಂತೆ ರೈಲ್ವೆ ಇಲಾಖೆ ಮತ್ತು ರೈಲ್ವೆ ಸಚಿವಾಲಯಕ್ಕೆ ಜಿಲ್ಲಾ ಆಡಳಿತ ಶಿಫಾರಸು ಕಳುಹಿಸಬೇಕೆಂದು ಒಕ್ಕೂಟವು ಬೇಡಿಕೆ ಮಾಡಿದೆ. ಈ ಸಂದರ್ಭದಲ್ಲಿ ಒಕ್ಕೂಟದ ಗೌರವಾಧ್ಯಕ್ಷ ದೇಸಾಯಿ ದೊತರಬಂಡಿ, ಜಿಲ್ಲಾ ಉಪಾಧ್ಯಕ್ಷೆ ಸಾವಿತ್ರಮ್ಮ, ತಾ ಅಧ್ಯಕ್ಷೆ ಲಕ್ಷ್ಮೀ, ಪುರಸಭೆ ಮಾಜಿ ಸದಸ್ಯ ಎಸ್.ವೆಂಕೋಬ, ಪುರಸಭೆ ನಾಮ ನಿರ್ದೇಶಕ ಸದಸ್ಯ ವಿಜಯಕುಮಾರ್ ಗೌಡ, ಒಕ್ಕೂಟದ ಸದಸ್ಯರಾದ ಮಹದೇವಪ್ಪ ಹೂಗಾರ್, ಕೆ.ಸತ್ಯನಾರಾಯಣ, ವಿ.ಮೌನೇಶ, ಬಿ.ಸುರೇಶ, ಮಂಜುನಾಥ ಸೇರಿದಂತೆ ಇನ್ನಿತರರು ಇದ್ದರು.

## ಎಲ್‌ಬಿಎಸ್ ನಗರದ 12ನೇ ಅಂಗನವಾಡಿ ಕೇಂದ್ರದಲ್ಲಿ ಎಲ್ ಕೆಜಿ, ಯುಕೆಜಿ ಪೂರ್ವ ಪ್ರಾಥಮಿಕ ತರಗತಿಗೆ ಶುಭಾರಂಭ

❏ ನೈಜ್ಯ ದೆಸೆ ನ್ಯೂಸ್

ರಾಯಚೂರು ನವೆಂಬರ್ 28 (ಕರ್ನಾಟಕ ವಾರ್ತೆ): ರಾಯಚೂರು ನಗರದ ಮಡ್ಡಿಪೇಟೆ ವ್ಯಾಪ್ತಿಯಲ್ಲಿ ಬರುವ ಎಲ್‌ಬಿಎಸ್ ನಗರದ 12ನೇ ಅಂಗನವಾಡಿ ಕೇಂದ್ರದಲ್ಲಿ ನವೆಂಬರ್ 28ರಂದು ಎಲ್ ಕೆಜಿ ಹಾಗೂ ಯುಕೆಜಿ ಪೂರ್ವ ಪ್ರಾಥಮಿಕ ತರಗತಿ ಆರಂಭದ ಕಾರ್ಯಕ್ರಮ ನಡೆಯಿತು.

ಬೆಂಗಳೂರಿನ ಮೇಕ್ರಿ ಸರ್ಕಲ್ ಹತ್ತಿರದ ಅರಮನೆ ಮೈದಾನದಲ್ಲಿನ ಕೃಷ್ಣ ವಿಹಾದಲ್ಲಿ ನವೆಂಬರ್ 28ರಂದು ನಡೆದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಸುವರ್ಣ ಮಹೋತ್ಸವ ಕಾರ್ಯಕ್ರಮದಲ್ಲಿ ರಾಯಚೂರು ನಗರದ ಅಂಗನವಾಡಿ ಕೇಂದ್ರ ಸೇರಿದಂತೆ ರಾಜ್ಯದ 5000 ಅಂಗನವಾಡಿ




ಕೇಂದ್ರಗಳಲ್ಲಿ ಪೂರ್ವ ಪ್ರಾಥಮಿಕ ತರಗತಿ ಆರಂಭಿಸುವ ಬಗ್ಗೆ ಘೋಷಣೆ ಮಾಡುತ್ತಿದ್ದಂತೆ ರಾಯಚೂರು ನಗರದ ಅಂಗನವಾಡಿ ಕೇಂದ್ರದಲ್ಲಿ ಹಬ್ಬದ ಸಂಭ್ರಮ ಕಂಡುಬಂದಿತು. ಕಾರ್ಯಕ್ರಮ ಹಿನ್ನೆಲೆಯಲ್ಲಿ ಅಂಗನವಾಡಿ ಕೇಂದ್ರವನ್ನು ತಳಿರುತೋರಣಗಳಿಂದ ಶಿಂಗರಿಸಲಾಗಿತ್ತು. ಒಂದೇ ಬಗೆಯ ಬಣ್ಣದ ಅಂಗಿ ತೊಟ್ಟು ಶಿಸ್ತಿನಿಂದ ಆಗಮಿಸಿ, ಲವಲವಿಕೆಯಿಂದಾಗಿ ಗಮನ ಸೆಳೆದವು. ಎಲ್ ಕೆಜಿ ಮತ್ತು ಯುಕೆಜಿ ತರಗತಿಗಳ ಶುಭಾರಂಭದ ಹಿನ್ನೆಲೆಯಲ್ಲಿ ಅಂಗನವಾಡಿಯಲ್ಲಿ ಸಿಹಿ ಅಡುಗೆ ತಯಾರಿಸಿ ಮಕ್ಕಳಿಗೆ ಬಡಿಸಲಾಯಿತು.

ಕಾರ್ಯಚಟುವಟಿಕೆ ವೀಕ್ಷಣೆ: ಎಲ್‌ಬಿಎಸ್ ನಗರದ ಅಂಗನವಾಡಿ ಕೇಂದ್ರದ ಲ್ಲಿನ ಮೂಲಸೌಕರ್ಯ ಮತ್ತು ಮಕ್ಕಳ ಚಟುವಟಿಕೆ ವೀಕ್ಷಣೆಗೆ ಕಾರ್ಯಕ್ರಮದಲ್ಲಿ ಅವಕಾಶ ಕಲ್ಪಿಸಲಾಗಿತ್ತು. ರಾಜ್ಯದ 5000 ಅಂಗನವಾಡಿಗಳ ಪೈಕಿ ಆಯ್ದ ಕೆಲ ಅಂಗನವಾಡಿಗಳ ಚಟುವಟಿಕೆಯನ್ನು ವಿಡಿಯೋ ಕಾನ್ಫರೆನ್ಸ್ ಮೂಲಕ ಪ್ರದರ್ಶಿಸಲಾಯಿತು. ರಾಯಚೂರ ಅಂಗನವಾಡಿ ಕೇಂದ್ರದ ಮಕ್ಕಳನ್ನು ಖುರ್ಚಿಗಳಲ್ಲಿ ಸಾಲಾಗಿ ಕುಳಿಸಿ ಅಂಗನವಾಡಿ ಶಿಕ್ಷಕಿಂಯರು ಪಾಠ ಬೋಧನೆಯ ಚಟುವಟಿಕೆ ನಡೆಸಿದರು. ಸಂತಷ: ನಮ್ಮ ಎಲ್‌ಬಿಎಸ್ ನಗರದ 12ನೇ ಅಂಗನವಾಡಿ ಕೇಂದ್ರವು ಮೂಲಭೂತ ಸೌಕರ್ಯ ಹೊಂದಿದೆ. ಕಸದಿಂದ ರಸ ಅನ್ನುವಂತೆ ಪರಿಸರದಲ್ಲಿನ ಸಾಮಗ್ರಿಗಳನ್ನು ಮತ್ತು ಇಲಾಖೆಯಿಂದ ವಿತರಿಸಿದ ಶಾಲಾ ಕಿಟಗಳನ್ನು ಮಕ್ಕಳ ಕಲಿಕೆಗೆ ಬಳಸಿಕೊಂಡಿದ್ದೇವೆ.

ಸೂಕ್ತ ತರಬೇತಿ ಪಡೆದುಕೊಂಡು ಈಗಾಗಲೇ ಪೂರ್ವ ಪ್ರಾಥಮಿಕ ತರಗತಿಗೆ ಎಲ್ಲ ರೀತಿಯ ಸಿದ್ಧತೆ ಮಾಡಿಕೊಂಡಿದ್ದೇವೆ. ನಮ್ಮ ಅಂಗನವಾಡಿಯು ಆಯ್ಕೆಯಾಗಿದ್ದು ಸಂತಷ ಅನಿಸಿದೆ. ಮಾನ್ಯ ಸಚಿವರು, ಸಂಸದರು, ಶಾಸಕರು, ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್ ಸಿಇಓ ಅವರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಧಿಕಾರಿಗಳು, ರಾಯಚೂರು ಸಿಡಿಪಿಓ, ಜಿಲ್ಲಾ ನಿರೂಪನಾಧಿಕಾರಿಗಳು, ಹಿರಿಯ ಮೇಲ್ವಿಚಾರಕಿಯರು, ಪೋಷಣಾ ಅಭಿಯಾನದ ಸಂಯೋಜಕರ ಸಹಕಾರ ಮತ್ತು ಮಾರ್ಗದರ್ಶನಕ್ಕೆ ಧನ್ಯವಾದ ತಿಳಿಸುತ್ತೇವೆ ಎಂದು ಅಂಗನವಾಡಿಯ ಕಾರ್ಯಕರ್ತೆ ಶ್ರೀಮತಿ ರೇಷ್ಮಾ ಹಾಗೂ ಮೇಲ್ವಿಚಾರಕಿ ಭಾರತಿಭಾಯಿ ಅವರು ಇದೆ ವೇಳೆ ಸಂತಷ ವ್ಯಕ್ತಪಡಿಸಿದರು. ಕಾರ್ಯಕ್ರಮದಲ್ಲಿ ಅಂಗನವಾಡಿ ಕೇಂದ್ರ ವ್ಯಾಪ್ತಿಯ ನಾಗರಿಕರು, ಮಕ್ಕಳ ಪಾಲಕರು ಮತ್ತು ಇನ್ನೀತರರು ಇದ್ದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### MD Psychiatry

MD Psychiatry ಎಂಬುದು ಮೂರು ವರ್ಷಗಳ ಸ್ನಾತಕೋತ್ತರ ವೈದ್ಯಕೀಯ ಕೋರ್ಸ್ ಆಗಿದ್ದು, ಇದು ಮಾನಸಿಕ, ಭಾವನಾತ್ಮಕ ಮತ್ತು ವರ್ತನಾ ಅಸಮಾನತೆಗಳನ್ನು ಪತ್ತೆಹಚ್ಚಿ, ತಡೆಗಟ್ಟು, ಮತ್ತು ಚಿಕಿತ್ಸೆ ನೀಡುವ ವಿಷಯದಲ್ಲಿ ಪರಿಣತಿ ನೀಡುತ್ತದೆ. ಮನೋವೈದ್ಯಶಾಸ್ತ್ರವು ಮಾನಸಿಕ, ಭಾವನಾತ್ಮಕ ಮತ್ತು ನಡವಳಿಕೆಯ ಅಸ್ವಸ್ಥತೆಗಳ ರೋಗನಿರ್ಣಯ, ಚಿಕಿತ್ಸೆ ಮತ್ತು ತಡೆಗಟ್ಟುವಿಕೆಯ ಮೇಲೆ ಕೇಂದ್ರೀಕರಿಸಿದ ವೈದ್ಯಕೀಯ ವಿಶೇಷತೆಯಾಗಿದೆ. ಮನೋವೈದ್ಯರು ಮಾನಸಿಕ ಆರೋಗ್ಯದಲ್ಲಿ ಪರಿಣತಿ ಹೊಂದಿರುವ ವೈದ್ಯಕೀಯ ವೈದ್ಯರಾಗಿದ್ದಾರೆ ಮತ್ತು ಮನಶ್ಶಾಸ್ತ್ರಜ್ಞರಂತಲ್ಲದೆ ಔಷಧಿಗಳನ್ನು ಶಿಫಾರಸು ಮಾಡಬಹುದು. ಮನೋವೈದ್ಯರು ವೈದ್ಯಕೀಯ ಮತ್ತು ಮಾನಸಿಕ ಪರೀಕ್ಷೆಗಳ ಮೂಲಕ ಖಿನ್ನತೆ, ಆತಂಕ ಮತ್ತು ಸ್ಕಿಜೋಫ್ರೇನಿಯಾದಂತಹ ಪರಿಸ್ಥಿತಿಗಳನ್ನು ನಿರ್ಣಯಿಸುತ್ತಾರೆ ಮತ್ತು ಈ ಅಸ್ವಸ್ಥತೆಗಳನ್ನು ನಿರ್ವಹಿಸಲು ಮತ್ತು ಚಿಕಿತ್ಸೆ ನೀಡಲು ಔಷಧಿ, ಮಾನಸಿಕ ಚಿಕಿತ್ಸೆ (ಚರ್ಚೆ ಚಿಕಿತ್ಸೆ) ಮತ್ತು ಇತರ ವೈದ್ಯಕೀಯ ಚಿಕಿತ್ಸೆಗಳ ಸಂಯೋಜನೆಯನ್ನು ಬಳಸಬಹುದು.

ಅವಧಿ: 3 ವರ್ಷಗಳು ಮಾನ್ಯ MBBS ಪದವಿ . 1 ವರ್ಷದ ಕಡ್ಡಾಯ ಇಂಟರ್ನ್ಶಿಪ್ ಪೂರ್ಣಗೊಳಿಸಿರಬೇಕು ಒಲಿಖ/ ಓಒಲಿ ಅಥವಾ ರಾಜ್ಯ ವೈದ್ಯಕೀಯ ಮಂಡಳಿ ನೋಂದಣಿ ಓಇಇಖಿ-ಕಉ ಪ್ರವೇಶ ಪರೀಕ್ಷೆಯಲ್ಲಿ ಮಾನ್ಯ ಅಂಕ

ಕೇಂದ್ರೀಕೃತ ವಿಷಯಗಳು: ಮಾನಸಿಕ ಅಸ್ವಸ್ಥತೆಗಳ ಅಂದಾಜು, ನಿರ್ಣಯ, ತಡೆಗಟ್ಟುವಿಕೆ, ಚಿಕಿತ್ಸೆ

ಕೋರ್ಸ್ ಒಳಗೊಂಡಿದ್ದು: ಸೈದ್ಧಾಂತಿಕ ಜ್ಞಾನ, ಕ್ಲಿನಿಕಲ್ ತರಬೇತಿ, ರೋಗಿ ಸಂವಹನ ಮತ್ತು ನಿರ್ವಹಣೆ ಸಂಶೋಧನಾ ವಿಧಾನಶಾಸ್ತ್ರ

ಉದ್ಯೋಗ ಹುದ್ದೆಗಳು: ಸೈಕಿಯಾಟ್ರಿಸ್ಟ್, ಸೈಕೋಥೆರಪಿಸ್ಟ್,ಕನ್ಸಲ್ಟೆಂಟ್ ಸೈಕಿಯಾಟ್ರಿಸ್ಟ್,ಸಂಶೋಧಕ,ಮಾನಸಿಕ ಆರೋಗ್ಯ ತಜ್ಞ,ಮಾನಸಿಕ ಆರೋಗ್ಯ ಕಾರ್ಯಕ್ರಮ ಅಧಿಕಾರಿ, ಆಸ್ಪತ್ರೆಗಳು,ಖಾಸಗಿ ಕ್ಲಿನಿಕ್ಗಳು,ಮಾನಸಿಕ ಆರೋಗ್ಯ ಸಂಘಟನೆಗಳು,ಸಂಶೋಧನಾ ಸಂಸ್ಥೆಗಳು,ವೈದ್ಯಕೀಯ ಕಾಲೇಜುಗಳು, ಬಾಲ ಮತ್ತು ಕಿಶೋರ ಸೈಕಿಯಾಟ್ರಿ , ಫಾರೆನ್ಸಿಕ್ ಸೈಕಿಯಾಟ್ರಿ, ಫೆಲೋಶಿಪ್ ಅಥ-ವಾ ಆಓ ವಿಶೇಷೀಕರಣಗಳ ಮೂಲಕ ಇನ್ನಷ್ಟು ಪರಿಣತಿ

ಮಾನಸಿಕ ಆರೋಗ್ಯದ ಜಾಗೃತಿ: ಮಾನಸಿಕ ಆರೋಗ್ಯ ಸಮಸ್ಯೆಗಳನ್ನು ಗುರುತಿಸುವ ಸಾಮರ್ಥ್ಯ ರೋಗ ನಿರ್ಣಯ ಮತ್ತು ಚಿಕಿತ್ಸೆ , ಸುರಕ್ಷಿತ ವೈದ್ಯಕೀಯ ನಿರ್ವಹಣೆ: ಸಂಶೋಧನಾ ಕೌಶಲ್ಯ , ಸಂವಹನ ಮತ್ತು ಮನೋಚಿಕಿತ್ಸೆ

ರಾಯಚೂರಿನಲ್ಲಿ, ನವೋದಯ ವೈದ್ಯಕೀಯ ಕಾಲೇಜು (NMC) ಮತ್ತು ರಾಯಚೂರು ವೈದ್ಯಕೀಯ ವಿಜ್ಞಾನ ಸಂಸ್ಥೆ (RIMS) ನಲ್ಲಿ ಒ.ಆ. ಪದವಿ ಪಡೆಯಬಹುದು

## ನೋಂದಾಯಿತ ಸಂಘ ಸಂಸ್ಥೆಗಳಿಗೆ ಧನ ಸಹಾಯಕ್ಕಾಗಿ ಅರ್ಜಿ ಆಹ್ವಾನ

❑ ನೈಜ್ಯ ದೆಸೆ ನ್ಯೂಸ್

**ರಾಯಚೂರು: ನವೆಂಬರ್ 28 (ಕರ್ನಾಟಕ ವಾರ್ತೆ): 2025-26ನೇ ಸಾಲಿಗೆ ರಾಜ್ಯಾದ್ಯಂತ ಹಾಗೂ ಹೊರರಾಜ್ಯಗಳಲ್ಲಿ ಕ್ರಿಯಾತ್ಮಕ ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ನಾಡಿನ ಭಾಷಾ ಸಂವರ್ಧನೆ, ಕಲೆ, ಸಾಹಿತ್ಯ, ಸಂಗೀತ, ಜಾನಪದ, ನೃತ್ಯ ಕಲಾಪ್ರಕಾರಗಳನ್ನು ಉಳಿಸಿ ಬೆಳೆಸುವ ಸಲುವಾಗಿ ಕಾರ್ಯನಿರ್ವಹಿಸುತ್ತಿರುವ ನೋಂದಾಯಿತ ಸಂಘ-ಸಂಸ್ಥೆಗಳಿಗೆ ಧನಸಹಾಯ ನೀಡಲು ಹಾಗೂ ಕಲಾವಿದರಿಗೆ ವಾದ್ಯ ಪರಿಕರ ಮತ್ತು ವೇಷಭೂಷಣಗಳ ಖರೀದಿಗೆ ಸಹಾಯಧನ ಹಾಗೂ ಚಿತ್ರಕಲೆ/ಶಿಲ್ಪ ಕಲಾಕೃತಿಗಳ ಪ್ರದರ್ಶನಕ್ಕೆ ಸಹಾಯಧನ ನೀಡಲು ಸಾಮಾನ್ಯ/ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ಉಪ ಯೋಜನೆಯಡಿ ಆನ್ ಲೈನ್ ಮೂಲಕ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.**

ಈ ಸೌಲಭ್ಯ ಪಡೆಯಲು ಅರ್ಹ ಅಭ್ಯರ್ಥಿಗಳು ಸೇವಾಸಿಂಧು Sevasindhu.karnataka.gov.in ವೆಬ್ಸೈಟ್ ಗೆ ಭೇಟಿ ನೀಡಿ ಡಿಸೆಂಬರ್ 30ರೊಳಗಾಗಿ ಅರ್ಜಿಗಳನ್ನು ಸಲ್ಲಿಸಬಹುದಾಗಿದ್ದು, ನಿಗದಿತ ದಿನಾಂಕದ ನಂತರ ಸಲ್ಲಿಸುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಹಾಗೂ ಅರ್ಜಿಗಳನ್ನು ನೇರವಾಗಿ ಇಲಾಖೆಯಲ್ಲಿ ಸ್ವೀಕರಿಸುವುದಿಲ್ಲ. ಮಾಹಿತಿಗಾಗಿ 08532-232572 ಅನ್ನು ಹಾಗೂ ಜಿಲ್ಲೆಯ ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ರಾಯಚೂರು ಇವರನ್ನು ಕಚೇರಿ ಸಮಯದಲ್ಲಿ ಬೆಳಗ್ಗೆ 10 ರಿಂದ ಸಂಜೆ 6 ಗಂಟೆಯೊಳಗೆ ಮತ್ತು ಆಯಾ ಜಿಲ್ಲೆಯ ವ್ಯವಸ್ಥಾಪಕರು, ಸೇವಾಸಿಂಧು ಇವರನ್ನು ಸಂಪರ್ಕಿಸಬಹುದಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಪ್ರತಿಭಾ ಕಾರಂಜಿಯಲ್ಲಿ ಜವಳಗೇರಾ ಮುರಾರ್ಜಿ ಶಾಲೆಯ ವಿದ್ಯಾರ್ಥಿಗಳು ಅತ್ಯುತ್ತಮ ಸಾಧನೆ :ಪ್ರಾಚಾರ್ಯ ಮೌಲಾಲಿ ದೊಡ್ಡಮನಿ ಹರ್ಷ

❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ತಾಲೂಕಿನ ಜವಳಗೇರಾ ವಲಯ ಮಟ್ಟದ ಪ್ರತಿಭಾ ಕಾರಂಜಿ ಮತ್ತು ಕಲೋತ್ಸವ 2025 ಜವಳಗೇರಾದಲ್ಲಿ ನಡೆದ ಸ್ಪರ್ಧೆಗಳಲ್ಲಿ ಮುರಾರ್ಜಿ ದೇಸಾಯಿ ವಸತಿ ಶಾಲೆ ಜವಳಗೇರಾ ವಿದ್ಯಾರ್ಥಿಗಳು ಭಾಗವಹಿಸಿ ಅತ್ಯುತ್ತಮ ಸಾಧನೆ ಮಾಡಿದ್ದಾರೆ ಎಂದು ಶಾಲೆಯ ಪ್ರಾಚಾರ್ಯರು ಮೌಲಾಲಿ ದೊಡ್ಡಮನಿ ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.**

ಪ್ರೌಢ ಶಾಲೆಯ ವಿಭಾಗದಲ್ಲಿ ಯ-ರ್ರಿಸ್ವಾಮಿ ಹತ್ತನೇ ತರಗತಿ ವಿದ್ಯಾರ್ಥಿ ಹಿಂದಿ ಭಾಷಣದಲ್ಲಿ ಪ್ರಥಮ ಸ್ಥಾನ ಹಾಗೂ ಸವಿತಾ 9ನೇ ತರಗತಿ ವಿದ್ಯಾರ್ಥಿ ಕನ್ನಡ ಭಾಷಣ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಹಾಗೂ ಆಫಿಯ ಒಂಬತ್ತನೇ ತರಗತಿ ವಿದ್ಯಾರ್ಥಿನಿ ಇಂಗ್ಲಿಷ್ ಭಾಷಣದಲ್ಲಿ ಪ್ರಥಮ ಸ್ಥಾನ ಹಾಗೂ ರಾಧಿಕಾ 9ನೇ ತರಗತಿ ವಿದ್ಯಾರ್ಥಿನಿ ಆಶುಭಾಷಣ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಹಾಗೂ ಯರ್ರಿಸ್ವಾಮಿ ಮತ್ತು ಪ್ರಜ್ವಲ್ ರಸಪ್ರಶ್ನೆಯಲ್ಲಿ ಪ್ರಥಮ ಸ್ಥಾನ ಹಾಗೂ ವಂಶಿ 10ನೇ ತರಗತಿ ವಿದ್ಯಾರ್ಥಿನಿ




ಭಾವಗೀತೆ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಹಾಗೂ ಕೃಷ್ಣ 9ನೇ ತರಗತಿ ವಿದ್ಯಾರ್ಥಿ ಚಿತ್ರಕಲೆ ಸ್ಪರ್ಧೆಯಲ್ಲಿ ಪ್ರಥಮ ಹಾಗೂ ಕಾವೇರಿ 9ನೇ ತರಗತಿ ವಿದ್ಯಾರ್ಥಿನಿ ಮಿಮಿಕ್ರಿ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಗಳಿಸುವುದರ ಮೂಲಕ ಶಾಲೆಗೆ ಕೀರ್ತಿ ತಂದಿದ್ದಾರೆ ಹಾಗೂ ಅರುಣ್ ಕುಮಾರ್ ಹತ್ತನೇ ತರಗತಿ ಚರ್ಚಾ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ ಹಾಗೂ ಮಲ್ಲಿಕಾ ಎಂ 9ನೇ ತರಗತಿ ವಿದ್ಯಾರ್ಥಿನಿ ರಂಗೋಲಿ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ ಹಾಗೂ ಕಾಫಿಯ 9ನೇ ತರಗತಿ ವಿದ್ಯಾರ್ಥಿನಿ ಧಾರ್ಮಿಕ ಪಠಣದಲ್ಲಿ ದ್ವಿತೀಯ ಸ್ಥಾನ ಪಡೆದು ಪ್ರೌಢ ವಿಭಾಗಕ್ಕೆ ಕೀರ್ತಿ ತಂದಿದ್ದಾರೆ.

ಮತ್ತು ಪ್ರಾಥಮಿಕ ವಿಭಾಗದಲ್ಲಿ ತ್ರಿನೇತ್ರ ಪ್ರಬಂಧ ರಚನೆಯಲ್ಲಿ ಪ್ರಥಮ ಸ್ಥಾನ ಹಾಗೂ ಶಿವ ಪ್ರಸಾದ್ ಮಣ್ಣಿನ ಮಾದರಿ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ ವೆಂಕಟರೆಡ್ಡಿ ಮಿಮಿಕ್ರಿಯಲ್ಲಿ ದ್ವಿತೀಯ ಸ್ಥಾನ ಸೈಫ್ ಉದ್ದಿನ್ ಚಿತ್ರಕಲೆಯಲ್ಲಿ ದ್ವಿತೀಯ ಸ್ಥಾನ ಪಡೆದು ಪ್ರಾಥಮಿಕ ವಿಭಾಗಕ್ಕೆ ಕೀರ್ತಿ ತಂದಿದ್ದಾರೆ ಈ ವಿದ್ಯಾರ್ಥಿಗಳ ಸಾಧನೆಗೆ ಶಾಲೆಯ ಪ್ರಾಚಾರ್ಯರು ಮೌಲಾಲಿ ದೊಡ್ಡಮನಿ ಅವರು ಸುದ್ದಿಗೋಷ್ಠಿಯಲ್ಲಿ ಸಂತಸ ವ್ಯಕ್ತಪಡಿಸಿದ್ದಾರೆ ನಮ್ಮ ಶಾಲೆಯ ಸಾಧನೆಗೆ ತರಬೇತಿ ನೀಡಿದ ಎಲ್ಲಾ ನನ್ನ ಸಿಬ್ಬಂದಿ ಸ್ನೇಹಿತರಿಗೆ ತುಂಬು ಹೃದಯದ ಧನ್ಯವಾದಗಳು ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ಶಾಲೆಯ ಪ್ರಾಚಾರ್ಯರು ಮೌಲಾಲಿ ದೊಡ್ಡಮನಿ, ಸಹ ಶಿಕ್ಷಕರಾದ ವಿಶ್ವನಾಥ್ ಎ.ಕೆ , ರತೀಂದ್ರ ರಾಯ್,ದುರುಗಪ್ಪ, ಹನುಮೇಶ, ಮೌನೇಶ್, ಯೂಸುಫ್ ಸಾಬ್,ಆಂಜನೇಯ,ಸಣ್ಣ ಹುಸೇನಪ್ಪ,ಸುನಿಲ್ ಕುಮಾರ್ ಹಾಗೂ ಪ್ರಥಮ ದರ್ಜೆ ಸಹಾಯಕರು ಲಾವಣ್ಯ ಹಾಗೂ ನರ್ಸಿಂಗ್ ಆಫೀಸರ್ ಗೀತಾಂಜಲಿ ಸೇರಿ ವಿದ್ಯಾರ್ಥಿಗಳಿಗೆ ಅಭಿನಂದಿಸಿ ಮುಂದಿನ ತಾಲೂಕು, ಜಿಲ್ಲಾ , ರಾಜ್ಯ ಮಟ್ಟದ ಪ್ರತಿಭಾ ಕಾರಂಜಿ ಕಲಾತ್ಸವದಲ್ಲಿ ಕೂಡ ಇದೆ ರೀತಿ ನಿಮ್ಮ ಸಾಧನೆ ಮುಂದುವರೆಯಲಿ ಎಂದು ವಿದ್ಯಾರ್ಥಿಗಳಿಗೆ ಶುಭಾಶಯ ತಿಳಿಸಿದ್ದಾರೆ

# ಖ್ಯಾತ ಉರ್ದು ಕವಿ ಅಝೀಝುದ್ದೀನ್ ಬೆಳಗಾಮಿ ನಿಧನ

❑ ನೈಜ್ಯ ದೆಸೆ ನ್ಯೂಸ್

**ಖ್ಯಾತ ಉರ್ದು ಕವಿ ಅಝೀಝುದ್ದೀನ್ ಅಝೀಝ್ ಬೆಳಗಾಮಿ(71) ಅವ-ರಿಗೆ ಶುಕ್ರವಾರ ನಿಧನರಾಗಿದ್ದಾರೆ. ಅಝೀಝ್ ಬೆಳಗಾಮಿ ತಮ್ಮ ವಿಶಿಷ್ಟ ಧ್ವನಿ, ನಾತ್ ಕಾವ್ಯ ಚಿಂತನಾಶೀಲ ದೃಷ್ಟಿಕೋನ ಹಾಗೂ ಬಹುಮುಖ ಸಾಹಿತ್ಯ ಸೇವೆಗಳ ಮೂಲಕ ದೇಶ ಮತ್ತು ವಿದೇಶಗಳಲ್ಲಿ ಪ್ರಸಿದ್ಧರಾಗಿದ್ದರು. ಇವರ ಅಗಲಿಕೆಯು ಉರ್ದು ಸಾಹಿತ್ಯ ಲೋಕಕ್ಕೆ ತುಂಬಲಾರದ ನಷ್ಟವನ್ನುಂಟು ಮಾಡಿದೆ.**



ಮೂಲತಃ ಬೆಳಗಾವಿ ಜಿಲ್ಲೆಯವರಾಗಿದ್ದ ಅಝೀಝ್ ಬೆಳಗಾಮಿ, ಬೋಧನೆ, ಬರವಣಿಗೆ, ಪ್ರಕಟಣೆ ಮತ್ತು ಪ್ರಸಾರ ಸೇರಿದಂತೆ ಬಹುಮುಖ ವೃತ್ತಿಜೀವನವನ್ನು ಹೊಂದಿದ್ದರು. ಎಂ.ಎ ಮತ್ತು ಎಂ.ಫಿಲ್ ಪದವಿ ಪಡೆದಿದ್ದ ಅವರು, ಉರ್ದು ಸಾಹಿತ್ಯ ಮತ್ತು ಕಾವ್ಯಕ್ಕೆ ಗಮನಾರ್ಹ ಕೊಡುಗೆಗಳನ್ನು ನೀಡಿದ್ದಾರೆ.ಝುಂಜೀರ್-J-ದಸ್ತ್-M-ಪಾ ಎಂಬ ಪುಸ್ತಕ ಮತ್ತು ಹರ್ಫ್-M-ಸೌತ್ ಮತ್ತು ಸುಕೂನ್ ಕೆ ಲಟ್ಟೋಂಕಿ ತಾಝು ಎಂಬ ಎರಡು ಕವನ ಸಂಕಲನಗಳು ಪ್ರಕಟವಾಗಿವೆ. ಕೇರಳದಲ್ಲಿ ಮಲಯಾಳಂ ಭಾಷೆಯಲ್ಲಿ ಬಿಡುಗಡೆಯಾಗಿದ್ದ ಅಲ್ಲಾಮಾ ಇಟ್ಬಾಲ್ ಅವರ ಕವಿತೆಗಳ ಆಡಿಯೋ ಸೀಡಿಗೆ ಅಝೀಝ್ ಬೆಳಗಾಮಿ ಧ್ವನಿ ನೀಡಿದ್ದರು.

ಇದಲ್ಲದೇ, ಆಲ್ ಇಂಡಿಯಾ ರೇಡಿಯೋ ಮತ್ತು ಬೆಂಗಳೂರಿನ ದೂರದರ್ಶನ ಕೇಂದ್ರದ ಜೊತೆ ದೀರ್ಘಕಾಲದ ಸಂಬಂಧವನ್ನು ಅಝೀಝ್ ಬೆಳಗಾಮಿ ಹೊಂದಿದ್ದರು. ಅಲ್ಲದೆ, ವಿವಿಧ ಕ್ಷೇತ್ರಗಳ 50ಕ್ಕೂ ಹೆಚ್ಚು ಪ್ರಮುಖ ವ್ಯಕ್ತಿಗಳ ಸಂದರ್ಶನವನ್ನು ಮಾಡಿದ್ದರು. ಬೆಂಗಳೂರಿನ ಮಸ್ಜಿದೆ ಖಾದ್ರಿಯಾದಲ್ಲಿ ಇಶಾ ನಮಾಝ್ ನಂತರ ನಮಾಝು ಜನಾಝು ನೆರವೇರಲಿದ್ದು, ಖುದ್ದೂಸ್ ಸಾಹೇಬ್ ಖಬರಸ್ತಾನ್ ನಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ...

# ಶಾಲಾ ಮಕ್ಕಳಲ್ಲಿರುವ ಪ್ರತಿಭೆಯನ್ನು ಗುರುತಿಸುವುದೇ ಪ್ರತಿಭಾ ಕಾರಂಜಿ; ಆರೀಫ್ ಮಿಯಾ

❑ ನೈಜ್ಯ ದೆಸೆ ನ್ಯೂಸ್

**ಶಾಲಾ ಮಕ್ಕಳಲ್ಲಿರುವ ಪ್ರತಿಭೆ " ಯನ್ನು ಗುರುತಿಸುವುದೇ ಪ್ರತಿಭಾ ಕಾರಂಜಿ, ಅದಕ್ಕೊಂದು ವೇದಿಕೆ ಒದಗಿಸು ವಲ್ಲಿ ಪ್ರತಿಭಾ ಕಾರಂಜಿ ಮತ್ತು ಕಲೋತ್ಸವ ಪ್ರಮುಖ ಪಾತ್ರ ವಹಿಸಿದೆ.ಈ ಕಾರ್ಯಕ್ರಮದ ಎಲ್ಲಾ ಪ್ರಯೋಜನವನ್ನು " ವಿದ್ಯಾರ್ಥಿಗಳು ಸದುಪಯೋಗ ಪಡೆದುಕೊಳ್ಳಬೇಕು ಎಂದು ಸರ್ಕಾರಿ ನೌಕರರ ಸಂಘದ ಸಿರವಾರ ತಾಲೂಕಾಧ್ಯಕ್ಷ ಆರೀಫ್ ಮಿಯಾ ಅವರು ಹೇಳಿದರು.**

ಅವರಿಂದು 1 ಮಾಚನೂರು ತಾಲೂಕಿನ ಗ್ರಾಮದ ಉನ್ನತಿಕರಿಸಿದ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲಾ ಆವರಣದಲ್ಲಿ ಜಿಲ್ಲಾ ಪಂಚಾಯತ್ ಹಾಗೂ ಶಾಲಾ ಶಿಕ್ಷಣ ಇಲಾಖೆ ಸಂಪನ್ಮೂಲ ಕೇಂದ್ರ ಕಲ್ಲೂರು ಇವರುಗಳ ಸಂಯುಕ್ತಾಶ್ರಯ ದಲ್ಲಿ 2025-26ನೇ ಸಾಲಿನ ಕಲ್ಲೂರು ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಹಾಗೂ ಕ್ಷೇತ್ರ ಸಮನ್ವಯಾಧಿಕಾ-ರಿಗಳ ಕಾರ್ಯಾಲ ಯ ಮಾನ್ವಿ ಸಮೂಹ ವಲಯ ಮಟ್ಟದ ಪ್ರತಿಭಾ ಕಾರಂಜಿ ಹಾಗೂ ಕಲೋತ್ಸವ ಕಾರ್ಯಕ್ರಮವನ್ನು ಉದ್ಘಾ ಟಿಸಿ ಮಾತನಾಡಿದರು.

ಮಕ್ಕಳು ಅತ್ಯಂತ ಉತ್ಸಾಹದಿಂದ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿರುವುದು ಖುಷಿ ತಂದಿದೆ ಎಂದರು. ಪ್ರಾಸ್ತವಿಕವಾಗಿ ಶಿವಕುಮಾರ ಮಾತನಾಡಿ, ಮಕ್ಕಳ ಪ್ರತಿಭೆಯನ್ನು ಬೆಳಕಿಗೆ ತರುವಲ್ಲಿ ತಂದೆ-ತಾಯಿ ಮತ್ತು ಶಿಕ್ಷಕರ ಶ್ರಮವೂ ಇದೆ. ಇಬ್ಬರೂ ಕೈ ಜೋಡಿಸಿದಾಗ ಮಾತ್ರ ಮಕ್ಕಳ ಪ್ರತಿಭೆ ಅನಾವರಣಗೊಳ್ಳುತ್ತದೆ. ಮಕ್ಕಳ ಬೆಳವಣಿಗೆಯಲ್ಲಿ ಶಿಕ್ಷಕರಷ್ಟೇ ಪೋಷಕರ ಪಾತ್ರವೂ ಅತಿ ಮುಖ್ಯವಾಗಿದೆ. ಮಕ್ಕಳನ್ನು ಪಠ್ಯ ಮತ್ತು ಪಠ್ಯತರ ಚಟುವ ಟಿಕೆಗಳಲ್ಲೂ ತೊಡಗಿಸಿಕೊಳ್ಳುವಂತೆ ಮಾಡಬೇಕು ಎಂದು ಸಲಹೆ ನೀಡಿದರು. ಮಗಳಲ್ಲಿ ಭಾಗವಹಿಸುತ್ತಾರೆ. ಅಲ್ಲಿ ಗೆದ್ದವರು ಜಿಲ್ಲಾ ಮತ್ತು ರಾಜ್ಯಮಟ್ಟದ ಸ್ಪರ್ಧೆಯಲ್ಲಿ ಪ್ರಾಥ-'ಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಜಾವಿದ್ ಪಾಷ ಅವರು ಮಾತನಾಡಿ, ಕ್ಲಸ್ಟ್ ಮಟ್ಟದಲ್ಲಿ ವಿಜೇತರಾದವರು ತಾಲ್ಲೂಕು ಮಟ್ಟದ ಕಾರ್ಯಕ್ರ ಆದ್ದರಿಂದ ಜಿಲ್ಲೆಯನ್ನು ಪ್ರತಿನಿಧಿಸುವ ಅವಕಾಶ ಪಡೆಯುತ್ತಾರೆ. ಯಾವುದೇ ಸ್ಪರ್ಧೆಗಳಲ್ಲಿ ಮಕ್ಕಳ ಪ್ರತಿಭೆಯನ್ನು ನಿಷ್ಪಕ್ಷಪಾತವಾಗಿ ಗುರುತಿಸಿ, ಪ್ರಶಸ್ತಿಯನ್ನು ತೀರ್ಮಾನಿಸಲಾಗುತ್ತದೆ ಎಂದರು.



ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಮಾಜಿ ಅಧ್ಯಕ್ಷ ಮಲ್ಲೇಶಪ್ಪ, ಎಂ.ಬಿ ಮಾರೆಪ್ಪ ಮಾತನಾಡಿದರು. ಇದೇ ವೇಳೆ ವಿವಿಧ ಶಾಲಾ ವಿದ್ಯಾರ್ಥಿ ಗಳಿಂದ ಸಾಂಸ್ಕೃತಿ-ಕ ಮತ್ತು ಕಲೋತ್ಸವ ಕಾರ್ಯಕ್ರಮಗಳು ನಡೆದವು.

ಈ ಸಂದರ್ಭದಲ್ಲಿ ಶಾಲೆಯ ಭೂದಾನಿ ಗಳಾದ ಚಂದ್ರಶೇಖರಪ್ಪ ಗೌಡ, ಗ್ರಾ.ಪಂ ಸದಸ್ಯ ಅಂಬಣ್ಣ ಕಡದೊಡ್ಡಿ, ಮುಸ್ಲಿಂ ಸರ್ಕಾರಿ ನೌಕರರ ಸಂಘದ ರಾಜ್ಯ ಉಪಾಧ್ಯಕ್ಷ ಮಹಿಬೂಬ್, ಆಜೀಮ್ ಪ್ರೇಮ್ ಜೀ ಪೌಡೇಷನ್ ಮಹ್ಮದ್ ಹುಸೇನ್ ಮಾಡಗಿರಿ, ಎಸ್ಡಿಎಂಸಿ ಅಧ್ಯಕ್ಷ ಬೀರಪ್ಪ ಮಾಲಿ ಪಾಟೀಲ್, ಸದಸ್ಯರಾದ ವಂದಪ್ಪ ನಾಯಕ, ರಾಜಶೇಖರ ಬಾಲೇರ, ಮಲ್ಲಿಕಾ ರ್ಜುನ ನಾಯಕ, ಶರಣಬಸವ ಕೊಸಗಿ, ಪಂಪಪಾ ತಿ, ಆಂಜನೇ ಯ, ರಾಜು ನಾರಾಯಣ, ತಿಮ್ಮಪ್ಪ, ಹುಸೇನಾ ಭಾಷಾ, ಆನಂದ ನಾಯಕ, ಪರಮೇಶ, ಹುಸೇನಪ್ಪ, ಎಂಡಿ ರಸೂಲ್, ಕಂ.ಅ. ಮಲ್ಲೇಶ, ಶಿವಪ್ಪ ಕೊಸಗಿ,ಶಿವು ನಾಯಕ, ಪ್ರಕಾಶ್, ಶಾಲೆಯ ಮುಖ್ಯ ಶಿಕ್ಷಕ ಮಂಜುನಾಥ, ಪ್ರೌಢ ಮುಖ್ಯ ಶಿಕ್ಷಕ ಶಿವಣ್ಣ, ಶಮಿವುಲ್ಲ, ವ ಭೀಮರಾಯ ಕಲ್ಲೂರು, ಸಹ ಶಿಕ್ಷಕರಾದ ಮ-ರಿಸ್ವಾಮಿ, ನಿರ್ಮಲಾ, ಖಾಲಿದ ಸುಲ್ತಾನ್, ಅತಿಥಿ ಶಿಕ್ಷಕರಾದ ಮೊದಿನ್ ಸಾಬ್, ಜಯಪ್ಪ, ಶ್ರೀನಿವಾಸ್, ಹನುಮೇಶ್, ಸುರೇಶ, ಶಿವಪ್ಪ ನಾಯಕ ಕಲ್ಲೂರು, ಮಲ್ಲಮ್ಮ, ಸುಜಾತಾ, ಭುವನೇಶ್ವರಿ, ಕಲ್ಯಾಣ ಕ' ವತಾರ', ಸೌರಿ ದ0ತ್ ವಿದ್ಯಾರ್ಥಿಗಳು ಇದ್ದರು.

## ಹಾಡು ಹಗಲೇ ಸಂಯುಕ್ತ ಕರ್ನಾಟಕ ವರದಿಗಾರ ಸಿದ್ದನಗೌಡ ಮನೆಯಲ್ಲಿ 14 ಲಕ್ಷ ಹಣ 95 ಗ್ರಾಂ ಚಿನ್ನ ಕಳವು ಪ್ರಕರಣ ದಾಖಲು .

❑ ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರು: ನ.29 ಪಟ್ಟಣದ ಎಕ್ಸೆಲೆಂಟ್ ಸ್ಕೂಲ್ ಬಳಿ ಇರುವ ಸಂಯುಕ್ತ ಕರ್ನಾಟಕ ವರದಿಗಾರನ ಮನೆಯಲ್ಲಿ ನಿನ್ನೆ ಹಾಡು ಹಗಲೆ ಕಳುವಾದ ಘಟನೆ ನಡೆದಿದೆ.**

ವರದಿಗಾರ ಸಿದ್ದನಗೌಡ ನಿವಾಸದಲ್ಲಿ ಮಧ್ಯಾಹ್ನ ಹಿಂಬದಿಯ ಬಾಗಿಲು ಮುರಿದು ಮನೆ ಪ್ರವೇಶಿಸಿದ ಕಳ್ಳರು 14 ಲಕ್ಷ ನಗದು ಮತ್ತು 95 ಗ್ರಾಂ ಚಿನ್ನಾಭರಣ ಕದ್ದು ಪರಾಧಿಯಾಗಿದ್ದಾರೆ. ಮನೆಯಲ್ಲಿ ಯಾರು ಇಲ್ಲದಿರುವುದನ್ನು ಗಮನಿಸಿ ಕಳ್ಳರ ತಂಡ ಮನೆಯ ಹಿಂಭಾಗಲಿನಿಂದ ಒಳ ಪ್ರವೇಶಿಸಿದ್ದಾರೆ. ವರದಿಗಾರ ಸಿದ್ದನಗೌಡ ಅವರು ನಿನ್ನೇ ರಾಯಚೂರಿನಲ್ಲಿ ಮೀಟಿಂಗ್ ಗೆ ಹೋಗಿದ್ದರು ಪತ್ನಿ ಶಾಲಾ ಶಿಕ್ಷಕಿಯಾಗಿದ್ದರಿಂದ ಶಾಲೆಗೆ ತೆರಳಿದ್ದರು. ಇತ್ತೀಚೆಗಷ್ಟೇ ಪಿತ್ರಾಜಿತ ಹೊಲ ಮಾರಿ 14 ಲಕ್ಷ ರೂಪಾಯಿ ಮನೆಯಲ್ಲಿ ಇಡಲಾಗಿತ್ತು. ಮಾಂಗಲ್ಯ ಸರ, ಝುಮಕಿ, ಕಿವಿಯೋಲೆ, ಉಂಗುರ, ಸೇರಿ ಒಟ್ಟು 95 ಗ್ರಾಂ ಚಿನ್ನ, 50 ಗ್ರಾಂ ಬೆಳ್ಳಿಯ ಆಭರಣ ಕಳುವಾಗಿದೆ. ಈ ಕುರಿತು ಸ್ಥಳೀಯ ಲಿಂಗಸಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಪಕ್ಕದ ನಿವಾಸದ ಸಿ ಸಿ ಕ್ಯಾಮೆರಾ ಪಡೆಯಲಾಗಿದ್ದು, ಕಳ್ಳರ ಪತ್ತೆ ಕಾರ್ಯ ತೀವ್ರ ನಡೆದಿದೆ.ಘಟನಾ ಸ್ಥಳಕ್ಕೆ ಪೊಲೀಸ್ ಅಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿ ತನಿಖೆಯನ್ನು ಕೈಗೊಂಡಿದ್ದಾರೆ.



# ಡಿ.27 ರಿಂದ 3 ನೇ ಹಂತದ ಜಲಜಾಗೃತಿ ಜನಜಾಗೃತಿ ನಿರ್ಮಲ ತುಂಗಭದ್ರಾ ಅಭಿಯಾನ ಪಾದಯಾತ್ರೆ: ಬಸವನಗೌಡ ಬ್ಯಾಗವಾಟ

❑ ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಪಟ್ಟಣದ ಪ್ರವಾಸಿ ಮಂದಿರದಲ್ಲಿ ರಾಷ್ಟ್ರೀಯ ಸ್ವಾಭಿಮಾನ ಆಂದೋಲನ ನವದೆಹಲಿ, ಪರ್ಯಾವರಣ ಟ್ರಸ್ಟ್ ಶಿವಮೊಗ್ಗ, ನಿರ್ಮಲ ತುಂಗಭದ್ರಾ ಅಭಿಯಾನ ಸಮಿತಿ ಕರ್ನಾಟಕ ಸಂಯುಕ್ತಾಶ್ರಯದಲ್ಲಿ ಡಿ.27 ರಿಂದ ನಡೆಯಲಿರುವ ಕಿಷ್ಕಿಂದೆ ಯಿಂದ ಮಂತ್ರಾಲಯದವರೆಗೆ 3 ನೇ ಹಂತದ ಜಲಜಾಗೃತಿ ಜನಜಾಗೃತಿ ನಿರ್ಮಲ ತುಂಗಭದ್ರಾ ಅಭಿಯಾನ ಪಾದಯಾತ್ರೆಯ ಭಿತ್ತಿ ಚಿತ್ರಗಳನ್ನು ಬಿಡುಗಡೆಗೊಳಿಸಿ ಮಾಜಿ ಶಾಸಕ ಬಸವನಗೌಡ ಬ್ಯಾಗವಾಟ ಮಾತನಾಡಿ ಆಂಜನಾದ್ರಿ ಬೆಟ್ಟದಿಂದ ಪಾದಯಾತ್ರೆ ಪ್ರಾರಂಭವಾಗಿ ಮಂತ್ರಾಲಯದವರೆಗೆ ನಡೆಯಲಿದೆ ಮಂತ್ರಾಲಯದಲ್ಲಿ ಆಂಧ್ರ ಪ್ರದೇಶದ ಉಪಮುಖ್ಯಮಂತ್ರಿ ಪವಾನ್ ಕಲ್ಯಾಣ ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ.**

ಮಾನ್ವಿ ತಾಲೂಕಿಗೆ ಪೋತ್ನಾಳ್ ನಿಂದ ಪಾಯಾತ್ರೆ ಪ್ರವೇಶ ಮಾಡಲಿದ್ದು ಹಿರೆಕೋಟ್ನೆಕಲ್ ನಲ್ಲಿ ವಾಸ್ತವ್ಯ ಹೂಡಲಿದ್ದರೆ. ಮಾನ್ವಿ ನಗರದಲ್ಲಿ ಪಾದಯಾತ್ರೆ ಸಾಗಿ ನೀರಮಾನ್ವಿಯಲ್ಲಿ ವಾಸ್ತವ್ಯ ಮಾಡಿ ನಂತರ ರಾಜೋಳಿ ಮೂಲಕ ಮಂತ್ರಾಲಯಕ್ಕೆ ಪಾದಯಾತ್ರೆ ತಲುಪಲಿದೆ ತಾಲೂಕಿಗೆ ಆಗಮಿಸುವ ಪಾದಯಾತ್ರೆಯಲ್ಲಿ ತಾಲೂಕಿನ ವಿವಿಧ ಮಠಗಳ ಶ್ರೀಗಳು, ಶಾಲಾ ಮಕ್ಕಳು, ವಿವಿಧ ಪಕ್ಷಗಳ ಜನಪ್ರತಿನಿದಿಗಳು,ಮುಖಂಡರು ,ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಜನರಲ್ಲಿ ತುಂಗಭದ್ರಾನದಿಯ ಉಳಿವಿನ ಕು-ರಿತು ಜಾಗೃತಿ ಮೂಡಿಸಲಿದ್ದಾರೆ ಎಂದು ತಿಳಿಸಿದರು.




ರಾಷ್ಟ್ರೀಯ ಸ್ವಾಭಿಮಾನ ಅಂದೋಲನ ನವದೇಹಲಿಯ ದಕ್ಷಿಣ ಭಾರತ ಪ್ರಮುಖರಾದ ಸಿ.ಪಿ. ಮಾದವನ್ ಮಾತನಾಡಿ, ದೇಶದಲ್ಲಿ 70ಕ್ಕೂ ನದಿಗಳು ತೊಂದರೆಗೊಳಗಾಗಿವೇ, ದೇಶದ ಅತ್ಯಂತ ಪವಿತ್ರವಾದ ನದಿಗಳು ಕೂಡ ಕಲುಷಿತಗೊಳ್ಳುತ್ತಿವೆ, ಗಂಗಾ, ಯಮುನ,ನರ್ಮಾದ ಪಾಲ್ಗುಣಿ ನದಿಗಳನ್ನು ಸ್ವಚ್ಚಗೊಳಿಸಲಾಗುತಿದೆ,ನದಿಯ ನೀರು ಕುಲುಷಿತಗೊಳ್ಳುತ್ತಿರುವುದರಿಂದ ಕುಡಿಯುವುದಕ್ಕೆ ಯೋಗ್ಯವಾಗಿಲ್ಲ, ಪ್ರತಿ ವರ್ಷ 4ಕೋಟಿ ಜನರಿಗೆ ಇಂದು ಶುದ್ದವಾದ ನೀರು ದೊರೆಯುತ್ತಿಲ್ಲ ರಾಜ್ಯದಲ್ಲಿ ತುಂಗಭದ್ರ,ಕಾವೇರಿ ನದಿಯ ನೀರು ಕೂಡ ಕಲುಷಿತ ಗೊಂಡು ಕುಡಿಯುವುದಕ್ಕೆ ಯೋಗ್ಯವಾಗಿಲ್ಲ ಎಂದು ವರದಿಗಳು ಹೇಳುತ್ತಿವೆ ಜನರಲ್ಲಿ ಕ್ಯಾನ್ಸರ್ ಮತ್ತು ಕಾಮಲೆ ರೋಗಗಳು ಹೆಚ್ಚಾಗಿ ವರದಿಯಾಗುತ್ತವೆ.

ಅಂದರಿಂದ ನಮ್ಮ ತುಂಗಭದ್ರ ನದಿಯನ್ನು ಸ್ವಚ್ಚವಾಗಿಟ್ಟುಕೊಳ್ಳುವುದಕ್ಕೆ ನದಿಗೆ ಕಾರ್ಖನೆಗಳ ತ್ಯಜ್ಯ,ಕೃಷಿ ರಾಸಾಯನಿಕ ಸೇರದಂತೆ,ನಗರ ಪಟ್ಟಣಗಳ ತ್ಯಾಜ್ಯದ ನೀರು ನರವಾಗಿ ನದಿಗೆ ಬಿಡದಂತೆ ಸರ್ಕಾರಕ್ಕೆ ಕ್ರಮ ಕೈಗೊಳ್ಳುವಂತೆ ಒತ್ತಾಯಿಸುವುದಲ್ಲದೆ ಈ ಕುರಿತು ಜನರಲ್ಲಿ ಜಾಗೃತಿ ಮೂಡಿಸುವುದಕ್ಕಾಗಿ ಪಾದಯಾತ್ರೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ರಾಜ್ಯ ಸಂಚಲಕರಾದ ಬಾಲಕೃಷ್ಣ ನಾಯ್ಡು,ಜಿಲ್ಲಾ ಸಂಚಲಕಾರದ ಎನ್.ಉದಯಕುಮಾರ ಸಾಹುಕರ್, ಮಾನ್ವಿ ತಾ.ಸಂಚಲಕರಾದ ಅನಿತಾ ನವಲಕಲ್, ಸಿರವಾರ ಸಂಚಲಕರಾದ ನಗೇಶನಾಯಕ್, ಬಿಜೆಪಿ.ಮಂಡಲ ಅಧ್ಯಕ್ಷರಾದ ವೀರಭದ್ರಗೌಡ ಭೋಗವತಿ, ಶಿವರಾಜ್ ನಾಯಕ, ಮಲ್ಲನಗೌಡ ನಕ್ಕುಂದಿ,ಶರಣಪ್ಪಗೌಡ ನಕ್ಕುಂದಿ,ಮಲ್ಲಯ್ಯಗಣೇಕಲ್,ಹರಿಹಾರ ಪಾಟೀಲ್,ರುದ್ರಗೌಡ,ಜೆ.ಸುಧಾಕರ್ಗುರುಸಿದ್ದಪ್ಪ ಗೌಡ ಕಣೂರು,ವಿಶ್ವನಾಥ ರಾಯಪ್ಪ ವಕೀಲರು,ಲಿಂಗರಾಜ ಗಡಿಗಿ,ನಾಗರಾಜ ಬಳಿಗಾರ,ಗೋಪಾಲ ಇಭ್ರಮಪುರ,ಕುಮಾರಸ್ವಾಮಿ ಮೇದಾ,ಜಯರಾಜ್,ಸೇರಿದಂತೆ ಇನ್ನಿತರರು ಇದ್ದರು.